# ಕಲಾಸುಂದರಿ

## ಮುನ್ನುಡಿ

ಕಲಾಸುಂದರಿ ಸರಸಿಯಾದರೂ ಮಹಾತಪಸ್ವಿನಿ. ಆಕೆಯ ಬಹಿರಂಗದಲ್ಲಿ ತೇಜಸ್ಸಿರುವಂತೆಯೆ ಅಂತರಂಗದಲ್ಲಿ ತಪಸ್ಸಿದೆ: ಹಸುರು ಗಿಡ ಮರಗಳಿಂದಲೂ ನಗರ ಗ್ರಾಮಗಳಿಂದಲೂ ವನಪರ್ವತಗಳಿಂದಲೂ ಹೊಳೆಕೆರೆಗಳಿಂದಲೂ ನಲಿದು ನಗೆ ಸೂಸುತ್ತಿರುವ ಉರ್ವರೆಯ ಅಂತರಾಳದಲ್ಲಿ ಅನೇಕ ಶತಮಾನಗಳಿಂದಲೂ ಉನ್ಮತ್ತ ರಭಸದಿಂದ ಘೂರ್ಣಿಸುತ್ತಿರುವ ಜಲರೂಪದ ಅಗ್ನಿರಾಶಿ ತಪಸ್ಸು ಮಾಡುತ್ತಿರುವಂತೆ ಆಕೆಯ ಅಂತರಂಗದಲ್ಲಿ ತಪಸ್ಸಿದೆ. ಅಕೆ ಎಷ್ಟರಮಟ್ಟಿಗೆ ಭೋಗಿನಿಯೋ ಅದಕ್ಕಿಂತಲೂ ಹೆಚ್ಚಾಗಿ ಯೋಗಿನಿ. ಮೇಲೆ ಮೇಲೆ ನೋಡುವ ತೇಲುನೋಟದ ಮಂದಿಗೆ ಆಕೆಯ ಸೌಂದರ್ಯ ಮಾತ್ರ ಕಾಣುತ್ತದೆ; ಆಕೆಯಲ್ಲಿ ಆಗಾಧಪರಿಚಯವಿರುವ ರಸಋುಷಿಗಳಿಗೆ ಸೌಂದರ್ಯದ ಜೊತೆಗೆ ಅದಕ್ಕಿಂತಲೂ ಶಾಶ್ವತವಾದ ಮತ್ತು ಅದನ್ನೇ ಶಾಶ್ವತಗೊಳಿಸುವ ಭವ್ಯವಾದ ಓಜಸ್ಸೂ ತೋರುತ್ತದೆ. ಆಕೆ ಲಘುಮಾನಸರ ಅಲಸ ಸಮಯದ ನರ್ಮಮೂರ್ತಿಯಲ್ಲ; ಕಲೋಪಾಸಕರ ಹೃದಯ ಕುಟೀರದ ತಪೋಮೂರ್ತಿ. ಆಕೆಯಲ್ಲಿ ಕಾವ್ಯದ ರಮಣೀಯತೆಯೂ ತತ್ತ್ವದ ಸೂಕ್ಷ್ಮತೆಯೂ ಒಂದಾಗಿವೆ. ಹಸುಳೆಯ ಕ್ರೀಡಾಶೀಲವೂ ವೃದ್ಧನ ಧ್ಯಾನಶೀಲವೂ ಎರಡೂ ಆಕೆಯಲ್ಲಿ ಅಡಕವಾಗಿವೆ. ಆಕೆ ಬುದ್ಧಿ ಭಾವಗಳ ವಿದ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾರೂಪಸಿ.

ಕಲಾಸುಂದರಿಯ ಅವತಾರಗಳಲ್ಲಿ ಸರ್ವಶ್ರೇಷ್ಠವಾದುದೆಂದರೆ ಕವಿತೆ. ಕವಿತೆ ಇತರ ಕಲೆಗಳಿಗಿಂತಲೂ ಅತಿಶಯವಾದ ಗೌರವಕ್ಕೆ ಪಾತ್ರವಾಗಿದೆ. ಅದು ವಾಙ್ಮಯ ಶರೀರಯಾಗಿರುವುದರಿಂದ ರಾಗ ರಸ ಭಾವಗಳನ್ನು ಉದ್ದೀಪನಮಾಡಿ ಪವಿತ್ರಗೈಯುವಂತೆಯೆ ಮನಸ್ಸಿಗೆ ಜ್ಞಾನಜ್ಯೋತಿಯನ್ನು ದಾನ ಮಾಡಿ ಆತ್ಮವನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯುತ್ತದೆ. ನಮ್ಮನ್ನು ವ್ಯಕ್ತದ ಅಂಚಿಗೆ ಎಳೆದೊಯ್ದು ಅವ್ಯಕ್ತದ ಗಂಭೀರತೆಯನ್ನು ವೀಕ್ಷಿಸುವಂತೆ ಮಾಡುತ್ತದೆ. ಕವಿತೆಯಲ್ಲಿ ವೇದ ಶಾಸ್ತ್ರ ಕಾವ್ಯಗಳ ಪ್ರಭಾವಗಳೆಲ್ಲ ಐಕ್ಯವಾಗಿವೆ. ಕಲ್ಪನೆ, ಭಾವ, ಆಲೋಚನೆ ಎಲ್ಲವೂ ಅದರಲ್ಲಿ ಸಮರಸವಾಗಿರಬೇಕು. ಕಲ್ಪನೆ ಮಾತ್ರವಿದ್ದರೆ ಲಘುವಾಗುತ್ತದೆ; ಭಾವ ಮಾತ್ರವಿದ್ದರೆ ಬರುಗನಸಾಗುತ್ತದೆ; ಆಲೋಚನೆ ಮಾತ್ರವಿದ್ದರೆ ಶುಷ್ಕವಾಗುತ್ತದೆ. ಕಲ್ಪನೆ ಮತ್ತು ಭಾವ ಇವೆರಡೂ ಕವಿತೆಗೆ ಬಹುಮುಖ್ಯವಾದ ಅಂಗಗಳೆಂದು ಹೇಳುವವರು ಅವುಗಳೇ ಅದರ ಸರ್ವಸ್ವವೆಂದು ಹೇಳುವಷ್ಟರಮಟ್ಟಿಗೆ ಸಾಹಸ ಮಾಡುತ್ತಾರೆ. ಆಲೋಚನೆ ತತ್ತ್ವಶಾಸ್ತ್ರದ ಕಾರ್ಯ, ಆನಂದವೇ ಕವಿತೆಯ ಉದ್ದೇಶ; ಆದ್ದರಿಂದ ಹೃದಯವನ್ನು ಆನಂದಪಡಿಸುವ ಕರ್ತವ್ಯವನ್ನು ಬಿಟ್ಟು ಕವಿತೆ ಬುದ್ಧಿಗೆ ಶ್ರಮಕೊಡುವ ಕಾರ್ಯವನ್ನು ವಹಿಸಲಾಗದು ಎಂದು ಅಂಥವರ ಅಭಿಪ್ರಾಯ. ಆದರೆ ಪ್ರಪಂಚದ ಮಹಾಕವಿಗಳನ್ನು ತೆಗೆದುಕೊಂಡರೆ ಅವರೆಲ್ಲರೂ ಉತ್ತಮ ಆಲೋಚಕರೂ ಆಗಿದ್ದಾರೆ. ಅವರ ಮಹಾಕೃತಿಗಳು ಬೂರುಗದ ಅರಳೆಯಂತೆ ಹಗುರವಾಗಿಲ್ಲ. ವಜ್ರದಂತೆ ಘನವಾಗಿವೆ. ಅರಳೆ ಮಲಗುವುದಕ್ಕೆ ಮೃದುವಾಗಿದ್ದರೂ ಅದಕ್ಕೆಂದಿಗೂ ವಜ್ರದ ಬೆಲೆಯಿಲ್ಲ. ಇದನ್ನು ಚೆನ್ನಾಗಿ ವಿಚಾರಮಾಡಿ ನೋಡಿದರೆ ಧ್ಯಾನಮಯವೂ ತತ್ತ್ವಶೀಲವೂ ಅಲ್ಲದ ಕವಿತೆ ಎಷ್ಟೇ ಭಾವರಾಗ ಪೂರ್ಣವಾಗಿದ್ದರೂ ಅದರಲ್ಲಿ ಎಷ್ಟೇ ಮಧುರ ಪದಶೈಲಿಯಿದ್ದರೂ ಅದು ಸಮುದ್ರದ ತೆರೆಗಳ

ಮೇಲೆ ನಲಿದಾಡಿ ಮನಮೋಹಿಸುವ ಕ್ಷಣಿಕ ನಶ್ವರವಾದ ನೊರೆಯಂತೆಯೇ ಹೊರತು ಕಡಲಿನ ಆಳದಲ್ಲಿ ಗಂಭೀರ ಗೌರವದಿಂದ ಮೌನವಾಗಿರುವ ಮುತ್ತುಗಳಂತೆ ಮಾನ್ಯವಾಗಲಾರದು; ಘನವಾಗಲಾರದು; ಶಾಶ್ವತವಾಗಲಾರದು. ಎಂದರೆ ಉತ್ತಮ ಕವಿತೆಗೆ ತೇಜಸ್ಸಿನಂತೆ ತಪಸ್ಸೂ ಅತ್ಯಾವಶ್ಯಕ. ತಪಸ್ಸಿಲ್ಲದ ತೇಜಸ್ಸು ಪ್ರೇಮವಿಲ್ಲದ ಕಾಮದಂತೆ ತುಚ್ಛವಾದುದು. ಅದರಿಂದ ಇಂದ್ರಿಯಗಳಿಗೆ ತಾತ್ಕಾಲಿಕ ತೃಪ್ತಿ ಲಭಿಸಿದರೂ ಆತ್ಮಕ್ಕೆ ಚಿರಹಾನಿ ತಪ್ಪದು.

ಉತ್ತಮವಾದ ಕವಿತೆ ಕವಿಯ ಧ್ಯಾನದಿಂದಲೂ ತಪಸ್ಸಿನಿಂದಲೂ ಅನುಭವದ ಆಳದಿಂದಲೂ ಆವೇಶಪೂರ್ವಕವಾಗಿ ಬಳ್ಳಿಯಿಂದ ತಳಿರು ಹೂವು ಹೊಮ್ಮುವಂತೆ ಹೊರಗೆ ಬರಬೇಕು. ರೂಪ ಅಲಂಕಾರಗಳು ಅದಕ್ಕೆ ಎಷ್ಟೇ ಆವಶ್ಯಕವಾದರೂ – ಅವುಗಳಿಲ್ಲದ ಕವಿತೆಯೇ ಇಲ್ಲ, ಅವುಗಳಿರದಿದ್ದರೆ ಕವಿತೆಯೇ ಅಲ್ಲ ಎಂದು ಹೇಳುವಷ್ಟು ಆವಶ್ಯಕವಾದರೂ – ಆತ್ಮದ ಮುಂದೆ ಅವುಗಳನ್ನೆಲ್ಲ ಗೌಣವೆಂದೇ ಹೇಳಬೇಕು. ಒಳಗಡೆ ಕಾಣಿಸದೆ ಅಡಗಿಕೊಂಡು ದೇಹ ಸಮಸ್ತಕ್ಕೂ ಅವಲಂಬನ ರೂಪವಾಗಿರುವ ಎಲುಬುಗೂಡಿನ ಮೇಲೆ ದೇಹ ಸೌಂದರ್ಯವು ಹೇಗೆ ನಿಂತಿದೆಯೋ ಹಾಗೆಯೆ ಕವನಸುಂದರಿ ತತ್ತ್ವ, ಆಲೋಚನೆ, ಧ್ಯಾನಗಳೆಂಬ ಅಡರ್ಪುಗಳಿಂದಲೇ ನಾಲ್ಕುಕಾಲ ಬಾಳಲು ಸಮರ್ಥೆಯಾಗುವಳು. ಎಂದರೆ ಕವಿತೆ – ನಿಜವಾದ ಕವಿತೆ – ಬೇಸರವಾದಾಗ ಆಡಿ, ಆಮೇಲೆ ಬಿಸಾಡಬಹುದಾದ ಆಟದ ಗೊಂಬೆಯಂತಲ್ಲದೆ ದೇವಾಲಯದ ಗರ್ಭಗುಡಿಯಲ್ಲಿ ರತ್ನವೇದಿಕೆಯ ಮೇಲೆ ಇಟ್ಟು ಸರ್ವದಾ ಭಕ್ತಿಯಿಂದ ಪೂಜಿಸಲ್ಪಡುವ ದೇವಿವಿಗ್ರಹದಂತೆ ಅನವರತ ಆರಾಧನೆಗೆ ಅರ್ಹವಾದುದು. ಉತ್ತಮ ಕವಿತೆಯಲ್ಲಿ ಆಳವಾದ ಆಲೋಚನೆ ಇರಲೇಬೇಕು. ಅದರಲ್ಲಿಯೂ ಕಾವ್ಯವು ವ್ಯಂಜಕವಾದರಂತೂ ಹಾಗಿರುವುದು ಅತ್ಯಾವಶ್ಯಕ. ಶ್ರೇಷ್ಠ ಪ್ರತಿಭಾ ಸಂಪನ್ನನಾದ ಕವಿ ಸೃಷ್ಟಿಸಮುದ್ರದ ತಳದವರೆಗೂ ನುಗ್ಗಿ ಅತ್ಯುತ್ತಮವಾದ ಭಾವ ಚಿಂತಾರತ್ನಗಳನ್ನು ತನ್ನ ಕಲ್ಪನೆಯ ತಟ್ಟೆಯಲ್ಲಿಟ್ಟು ತಂದು ಬದುಕಿಗೆ ನಿವೇದಿಸಬೇಕು; ಮೇಲೆ ತೇಲುವ ಬರಿಯ ಬೆಳ್ನೊರೆಯನ್ನು ಮಾತ್ರ ಸಂಗ್ರಹಿಸಿದರೆ ಸಾಲದು.

ಮನುಷ್ಯಜಾತಿಯ ಗೌರವ ಅದರ ಬುದ್ಧಿಶಕ್ತಿಯಲ್ಲಿದೆ. ರಾಗ ಪ್ರೇಮ ಕ್ರೋಧ ದ್ವೇಷಗಳು ಸರ್ವ ಪ್ರಾಣಿಗಳಲ್ಲಿಯೂ ಸಮಾನವಾಗಿವೆ. ಅವುಗಳೆಲ್ಲವೂ ನಮಗಿರುವ ಶಕ್ತಿಗಳೇ ಆದರೂ ಅವುಗಳನ್ನೆಲ್ಲ ಆಳುವ ಶಕ್ತಿ, ಎಂದರೆ ಬುದ್ಧಿ, ಇಲ್ಲದೆ ಹೋದರೆ ಯಾವ ಪುರಷ್ಯಾರ್ಥವೂ ಕೈಗೂಡದು. ಅದಕ್ಕೆ ಬದಲಾಗಿ ಅನರ್ಥಕರವಾದರೂ ಆಗಬಹುದು. ಬುದ್ಧಿಯ ಈ ಉಪಯೋಗವು ವ್ಯಾವಹಾರಿಕ ಜಗತ್ತಿಗೆ ಸೇರಿದ್ದು. ವಾಸ್ತವ ಜಗತ್ತು ಮತ್ತು ವಾಸ್ತವ ಜೀವನಗಳನ್ನು ಬಿಟ್ಟು ಭಾವಜಗತ್ತು ಭಾವಜೀವನಗಳನ್ನೆ ತೆಗೆದುಕೊಂಡರೂ ಅಲ್ಲಿಯೂ ಬುದ್ಧಿಶಕ್ತಿಯ ಮಹಿಮೆ ಅಪ್ರತಿಹತವಾಗಿ ನಿಲ್ಲುತ್ತದೆ. ಏಕೆಂದರೆ, ಮಹದಾಲೋಚನೆ ಉತ್ತಮ ಕಲ್ಪನೆಗೆ ಸಹಕಾರಿಯಾಗುವಂತೆ, ಉಜ್ವಲ ಭಾವಕ್ಕೂ ಪ್ರೇರಕವಾಗುತ್ತದೆ. ಬುದ್ಧಿ ಹೆಚ್ಚಾದರೆ ಕಲ್ಪನೆ ಪೆಚ್ಚಾಗುತ್ತದೆ ಎಂದು ಕೆಲವರ ಮತ. ಆದರೆ ಅದೇನೂ ಸರ್ವವ್ಯಾಪಿಯಾದ ಸೂತ್ರವಲ್ಲ. ವಿಜ್ಞಾನ – ನಿಜವಾದ ವಿಜ್ಞಾನ – ನಿಜವಾದ ಕಾವ್ಯಕ್ಕೆ ವಿರೋಧಿಯಲ್ಲ. ವಿಜ್ಞಾನಶಾಸ್ತ್ರ ತತ್ತ್ವಶಾಸ್ತ್ರಗಳೆರಡೂ ಬುದ್ಧಿಸೂಕ್ಷ್ಮತೆಯ ಮೇಲೆ ನಿಂತಿವೆ; ಕಾವ್ಯಕಲೆಗಳು ಹೃದಯತೀಕ್ಷಣತೆಯ ಮೇಲೆ ನಿಂತಿವೆ. ಇದು ಸ್ವಲ್ಪಮಟ್ಟಿಗೆ ನಿಜವಾದರೂ ಬುದ್ಧಿಸೂಕ್ಷ್ಮತೆಯಿಂದ ಸಿದ್ಧಿಸಿದ ತಿಳಿವಳಿಕೆ ಹೃದಯದ ಕಲ್ಪನೆಯನ್ನೂ ಭಾವಗಳನ್ನೂ ಕೆರಳಿಸ ಬಲ್ಲುದು ಎಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಹಾಗೆಯೆ ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳು ನಮಗೆ ತೋರುವ ಭವ್ಯ ದರ್ಶನಗಳಿಗೆ ಕಲ್ಪನಾಶಕ್ತಿ ಮತ್ತು ಭಾವಗಳು ಎಷ್ಟರ ಮಟ್ಟಿಗೆ ಕಾರಣವಾಗಿವೆ? ಆ ದರ್ಶನಗಳಲ್ಲಿ ಅತ್ಯುತ್ತಮ ಕಾವ್ಯಕಲೆಯಲ್ಲಿ ಮಾತ್ರವೆ

ಗೋಚರವಾಗುವ ಕಲ್ಪನೆಯೂ ಭಾವವೂ ಎಷ್ಟಿವೆ ಎಂಬುದನ್ನು ಗಣನೆಗೆ ತೆಗೆದುಕೊಂಡರೆ ವಿಜ್ಞಾನ ತತ್ತ್ವಶಾಸ್ತ್ರಗಳಿಗೂ ಕಾವ್ಯಕಲೆಗಳಿಗೂ ಬುದ್ಧಿ ಆಲೋಚನೆಗಳಿಗೂ ಕಲ್ಪನೆ ಭಾವಗಳಿಗೂ ನಾವು ಮಾಡುವ ವಿಭಜನಾವ್ಯತ್ಯಾಸ ಎಷ್ಟು ಕೃತಕವಾದುದೆಂದು ಚೆನ್ನಾಗಿ ತೋರುತ್ತದೆ. ನಿಜವಾಗಿ ನೋಡಿದರೆ ಮನುಷ್ಯನ ವ್ಯಕ್ತಿತ್ವ ಏಕಾಖಂಡವಾದುದು – ಸಮಸ್ತ ಜಗತ್ತಿರುವಂತೆಯೆ. ನಾವು ನಮ್ಮಲ್ಲಿರುವ ಬೇರೆ ಬೇರೆ ಶಕ್ತಿಗಳನ್ನು ಸೂಚಿಸಲು ಬೇರೆ ಬೇರೆ ಪದಗಳನ್ನು ನಮ್ಮ ಸೌಕರ್ಯಕ್ಕಾಗಿ ಉಪಯೋಗಿಸುತ್ತೇವೆ. ಪದಗಳಿರುವ ಪೃಥಗ್ಭಾವವನ್ನು ಅದ್ವೈತವಾಗಿರುವ ಮೂಲವಸ್ತುವಿಗೂ ಆರೋಪಿಸುವುದು ಜ್ಞಾನದ ಅಜ್ಞಾನವೆಂದೆ ಹೇಳಬೇಕಾಗುತ್ತದೆ. ಆದ್ದರಿಂದ ಪ್ರತಿಭೆಯಲ್ಲಿ ಆಲೋಚನೆ, ಕಲ್ಪನೆ, ಭಾವಗಳು ಐಕ್ಯವಾಗಿವೆ, ಅಖಂಡವಾಗಿವೆ. ಬುದ್ಧಿಭಾವಗಳ ವಿದ್ಯುದಾಲಿಂಗನವೆ ಪ್ರತಿಭೆ. ಆದ್ದರಿಂದ ಪ್ರತಿಭೆಯುಳ್ಳ ಕವಿಯ ಬುದ್ಧಿ ಆತನಲ್ಲಿಯ ಕಲ್ಪನೆ ಭಾವಗಳಂತೆಯೆ ಮಹೋನ್ನತವಾಗಿರಬೇಕು. ಎಂದರೆ ಆತನ ದರ್ಶನದ ಹೃದಯದಲ್ಲಿ ತತ್ತ್ವದ ಅಮೃತಕಲಶವಿರಬೇಕು. ತತ್ತ್ವಗರ್ಭಿತವಲ್ಲದ ದರ್ಶನ ಎಷ್ಟೇ ಮನರಂಜಕವಾಗಿರಲಿ ಲಘುವಾದುದು. ಅದು ನೊರೆಯೆ ಹೊರತು ಮುತ್ತಲ್ಲ.

ಬುದ್ಧಿಸೂಕ್ಷ್ಮತೆ ಕಲ್ಪನೆಯ ವಿಸ್ತಾರವನ್ನೂ ಭಾವದ ತೀವ್ರತೆಯನ್ನೂ ಕಡಿಮೆ ಮಾಡುವ ಬದಲು ಉನ್ನತೆಗೈಯುತ್ತದೆ ಎಂಬ ವಿಷಯ ಒಂದು ಉದಾಹರಣೆ ತೆಗೆದುಕೊಂಡರೆ ಗೊತ್ತಾಗುತ್ತದೆ. ವೇದದ ಕವಿಗಳ ಕಾಲದಿಂದಲೂ ಆಕಾಶ, ಭೂಮಿ, ಸಮುದ್ರ, ತಾರೆ, ಅಗ್ನಿಪರ್ವತ, ಗಾಳಿ, ಬೆಂಕಿ, ಮೋಡ, ಮಳೆ, ಮಿಂಚು, ಗುಡುಗು, ಹೂವು, ಹಣ್ಣು, ಮಣ್ಣು ಎಲ್ಲವೂ ಇವೆ. ಆದರೆ ಅವರ ದೃಷ್ಟಿಗೂ ನಮ್ಮ ದೃಷ್ಟಿಗೂ ಎಷ್ಟು ವ್ಯತ್ಯಾಸವಾಗಿದೆ! ಇತ್ತೀಚಿನ ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಲಶಾಸ್ತ್ರ, ಖಗೋಲಶಾಸ್ತ್ರ ಇವುಗಳನ್ನೆಲ್ಲ ಅಧ್ಯಯನ ಮಾಡಿದವರಿಗೆ ಜಗತ್ತಿನ ಸ್ವರೂಪವೆ ಬದಲಾಯಿಸಿದಂತೆ ತೋರುವುದಿಲ್ಲವೆ? ವಿಶ್ವವೂ ಅದರ ಜೀವನವೂ ಹಿಂದಿನವರ ಕಲ್ಪನೆ ಕನಸಿನಲ್ಲಿಯೂ ಕಾಣದನಿತು ವಿಸ್ತಾರವಾಗಿಯೂ ಭವ್ಯವಾಗಿಯೂ ರಹಸ್ಯಪೂರ್ಣವಾಗಿಯೂ ಭಯಾನಕವಾಗಿಯೂ ಪೂಜ್ಯವಾಗಿಯೂ ಅನಿರ್ವಚನೀಯವಾಗಿಯೂ ಕಾಣುವುದಿಲ್ಲವೆ? ಆ ವಿಶ್ವರೂಪದ ದರ್ಶನದ ಮಹತ್ತು ಬೃಹತ್ತುಗಳ ಸಮ್ಮುಖದಲ್ಲಿ ನಮ್ಮಾತ್ಮ ವಿಕಂಪಿಸುವುದಿಲ್ಲವೆ? ಮೂಕವಾಗುವುದಿಲ್ಲವೆ? ಭಾವಲಯವಾಗುವುದಿಲ್ಲವೆ? ಕಲ್ಪನೆ ವಿಸ್ತಾರವನ್ನಾಗಲಿ ಎಲ್ಲೆಯನ್ನಾಗಲಿ ಅರಿಯದೆ ನಿರ್ವಾಣವಾಗುವುದಿಲ್ಲವೆ? ಜ್ಞಾನವು ಭಕ್ತಿಭಾವದಿಂದ ಜ್ವಾಲಾಮಯವಾಗುವುದಿಲ್ಲವೆ? ಆತ್ಮ ಪುನೀತವಾಗುವುದಿಲ್ಲವೆ? ಆ ಅನುಭವದಲ್ಲಿ ಕಾವ್ಯವಿಲ್ಲವೆ? ಆ ಅನುಭವದಿಂದ ಕಾವ್ಯಕ್ಕೆ ಕುಂದಾಗುತ್ತದೆ ಎನ್ನುವುದು ವ್ಯರ್ಥ ಶಿಶುಪ್ರಲಾಪ. ಅಂತಹ ಅನುಭವದ ಆವೇಶದಿಂದ ಹೊರಹೊಮ್ಮುವ ಕಾವ್ಯ ಚಿರಸ್ಥಾಯಿಯಾಗಿ ಲೋಕಪೂಜ್ಯವಾಗುವುದರಲ್ಲಿ ಸಂದೇಹವಿಲ್ಲ.

ಲೋಕಪೂಜ್ಯವಾಗುವುದರಲ್ಲಿ ಸಂದೇಹವಿಲ್ಲ; ಆದರೆ ಸರ್ವಜನಪ್ರಿಯವಾಗುತ್ತದೆಯೆ? ಈ 'ಜನಪ್ರಿಯತೆ' ಎಂಬ ಪದ ಈಚೀಚೆಗೆ ಬಹಳ ಅನರ್ಥಕಾರಿಯಾಗುವಂತೆ ತೋರುತ್ತದೆ 'ಜನಪ್ರಿಯತೆ' ಎಂದರೇನು? ಆ ಜನರಾದರೂ ಯಾರು? ಜನರೆಲ್ಲರೂ ಮೆಚ್ಚಿದ ಹೊರತು ಆ ಕಾವ್ಯ ಉತ್ತಮ ಕಾವ್ಯವಲ್ಲ ಎಂದು ಹೇಳುವುದಾದರೆ ಉತ್ತಮ ಕಾವ್ಯಗಳೇ ಅಸಾಧ್ಯ ಎಂದು ಹೇಳಬೇಕಾಗುತ್ತದೆ. ಉತ್ತಮ ಕಲಾಕಾರ್ಯದ ಸವಿಯನ್ನು ಆಸ್ವಾದಿಸುವ ಪುಣ್ಯವೂ ಸಾಮರ್ಥ್ಯವೂ ಪುಕ್ಕಟೆಯಾಗಿ ಬರುವುದಿಲ್ಲ. ಅದಕ್ಕೆ ಸಂಸ್ಕಾರವೂ ಅಭ್ಯಾಸವೂ ಎರಡೂ ಆವಶ್ಯಕ. ಪ್ರಕೃತಿ ಸೌಂದರ್ಯ – ಸೂರ್ಯ ಚಂದ್ರರ ಉದಯಾಸ್ತಗಳು, ವಸಂತಮಾಸದ ವನಶ್ರೀ, ಬತ್ತದ ಗದ್ದೆಗಳ ಪೈರುಪಚ್ಚೆ, ಮುಂಗಾರಿನ ಕರ್ಮುಗಿಲು,

ಕಣಿವೆಗಳಲ್ಲಿ ಸಮುದ್ರ ಸರೋವರಗಳನ್ನು ವಿರಚಿಸುವ ಮಾಗಿಯ ಮಂಜಿನ ಮಾಯಾ ಮೋಹ, ಇತ್ಯಾದಿ ಸಹಸ್ರಾರು ದೃಶ್ಯಗಳು ದಿನ ದಿನವೂ ಜನಗಳ ಕಣ್ಣೆದರು ಸುಳಿಯುತ್ತಿವೆ. ಆದರೆ ಎಷ್ಟು ಮಂದಿ ಅವುಗಳನ್ನು ವರ್ಡ್ಸ್‌ವರ್ತ್ ಕವಿಯಂತಾಗಲಿ, ವರ್ಣಶಿಲ್ಪಿ ವೆಂಕಟಪ್ಪನವರಂತಾಗಲಿ ಕಂಡುಣಲು ಸಮರ್ಥರಾಗಿದ್ದಾರೆ? ಕಲೆಯನ್ನು ಸವಿಯಲು ಕಲಾ ದೃಷ್ಟಿ ಬೇಕು. ಕವಿ ತನ್ನ ಪ್ರತಿಭೆಗೆ, ತನ್ನ ಕಲ್ಪನೆಗೆ, ತನ್ನ ಭಾವಕ್ಕೆ ಗೋಚರವಾಗುವ ಸೃಷ್ಟಿಯ ರಹಸ್ಯ ಆನಂದ ಸೌಂದರ್ಯಗಳನ್ನು ಕೈಲಾದಮಟ್ಟಿಗೂ ತನ್ನ ಕೃತಿಯಲ್ಲಿ ಪ್ರತಿಬಿಂಬಿಸಲು, ನಿಹಿತಗೈಯಲು ಸಾಹಸಮಾಡುತ್ತಾನೆ. ಅಂತಹ ಕೃತಿ ಹೊಸದಾಗಿರುವಾಗ ಜನರಿಗೆ ಅದು ರುಚಿಸದೆ ಹೋಗಬಹುದು; ಅರ್ಥವಾಗದಿರಬಹುದು. ಆ ಕೃತಿಯ ಆಳಕ್ಕೆ ಮುಳಗಲು, ಎತ್ತರಕ್ಕೆ ಏರಲು ಅವರಿಗೆ ಅಸಾಧ್ಯವಾಗಬಹುದು. ಆಗ ಅವರು ಅದನ್ನು ತಿರಸ್ಕರಿಸುವುದೂ ಹೀಯಾಳಿಸುವುದೂ ಸ್ವಾಭಾವಿಕ. ಹಾಗೆಂದು ಆ ಕಲಾಕೃತಿಯನ್ನೆ ಅಲ್ಪವೆಂದು ಅಲ್ಲಗಳೆಯುವುದಕ್ಕೆ ಆಗುತ್ತದೆಯೆ? ನೂತನವಾದುದರಲ್ಲಿ ಜನರಿಗೆ ಸಂಶಯ ಹೆಚ್ಚು. ಆ ಸಂಶಯ ಮೊದಮೊದಲು ಔದಾಸೀನ್ಯ, ತಿರಸ್ಕಾರಗಳ ರೂಪದಲ್ಲಿ ತೋರುತ್ತದೆ. ಎಲ್ಲಿಯೋ ಹಲಕೆಲವು ಕಲಾವಿದರಿಗೆ ಮಾತ್ರ ಅದರ ಮಹತ್ತು ತಿಳಿಯುತ್ತದೆ. ಅಂತಹರೇ ಅದನ್ನು ಪ್ರಶಂಸಿಸಿ ಪ್ರಚಾರಕಾರ್ಯಕ್ಕೆ ತೊಡಗುತ್ತಾರೆ; ಅದರ ಸೊಗಸು ಸೊಬಗುಗಳನ್ನು ಕುರಿತು ವಿಮರ್ಶೆಗಳನ್ನು ಬರೆಯುತ್ತಾರೆ. ಜನರು ಕಣ್ಣು ತೆರೆಯುತ್ತಾರೆ. ಆಮೇಲೆ ಕ್ರಮಕ್ರಮೇಣ ಜನರ ದೃಷ್ಟಿಯೂ ರುಚಿಯೂ ತಿದ್ದುಪಡೆದು ತಿರಸ್ಕಾರ ಔದಾಸೀನ್ಯಕ್ಕೆ ತಿರುಗಿ, ಔದಾಸೀನ್ಯ ಉಪಚಾರಕ್ಕೆ ತಿರುಗಿ, ಉಪಚಾರ ಪ್ರಶಂಸೆಗೂ ಆರಾಧನೆಗೂ ತಿರುಗುತ್ತದೆ. ಅದ್ದರಿಂದಲೆ ಪ್ರತಿಯೊಬ್ಬ ಪ್ರತಿಭಾಶಾಲಿಯಾದ ಮಹಾಕವಿಯೂ ಯಾವ ರುಚಿಯಿಂದ, ಯಾವ ದೃಷ್ಟಿಯಿಂದ ಜನರು ತನ್ನ ಕೃತಿಗಳ ಸೌಂದರ್ಯ ಮಹತ್ತುಗಳನ್ನು ಗ್ರಹಿಸಿ ಆಸ್ವಾದಿಸಲು ಸಮರ್ಥರಾಗುವರೋ ಆ ರುಚಿಯನ್ನೂ ದೃಷ್ಟಿಯನ್ನೂ ತಾನೇ ಪ್ರಯತ್ನದಿಂದಲೂ ಸಾಹಸದಿಂದಲೂ ಸಾವಧಾನವಾಗಿ ಜನರಲ್ಲಿ ಉತ್ಪತ್ತಿಮಾಡಿ ಕೊಳ್ಳಬೇಕಾಗುತ್ತದೆ ಎಂಬ ವಿಷಯ ಇತರ ಸಾಹಿತ್ಯ ಚರಿತ್ರೆಗಳು ತೋರುವ ನಿದರ್ಶನಗಳಿಂದ ನಮಗೆ ವಿಶದವಾಗುತ್ತದೆ. ಷೇಕ್ಸ್‌ಪಿಯರ್ ಮಹಾಕವಿಯ ನಾಟಕಗಳು ಅವನ ಕಾಲದಲ್ಲಿ ಮಹಾಕೃತಿಗಳೆಂದು ಪರಿಗಣಿತವಾಗಿರಲಿಲ್ಲ. ಅಲ್ಲದೆ ಆತನ ಜೊತೆಯಲ್ಲಿದ್ದ ಇತರ ನಾಟಕ ಕರ್ತೃಗಳ ಕೃತಿಗಳೇ ಹೆಚ್ಚು ಶ್ರೇಷ್ಠವಾದುವೆಂದು ಕೀರ್ತಿಪಡೆದಿದ್ದುವು. ರಂಗಭೂಮಿಯಲ್ಲಿಯೂ ಷೇಕ್ಸ್‌ಪಿಯರಿನ ನಾಟಕಗಳಿಗಿಂತಲೂ ಇತರ ನಾಟಕಗಳೇ ಹೆಚ್ಚಾಗಿ ಪ್ರಸರ್ಶಿತವಾಗುತ್ತಿದ್ದವಂತೆ. ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್' ಪುರಾಣಕಾವ್ಯ ಪ್ರಕಟವಾದಾಗ ಅದಕ್ಕಿಂತಲೂ ಅತ್ಯಲ್ಪವಾಗಿದ್ದ (ಅವುಗಳ ಹೆಸರು ಕೂಡ ಈಗ ಮರೆತುಹೋಗಿರಬಹುದು!) ಎಷ್ಟೋ ಸಾಧಾರಣ ಕೃತಿಗಳಿಗೆ ಲಭಿಸಿದ್ದ ಕೀರ್ತಿಯಾಗಲಿ, 'ಜನಪ್ರಿಯತೆ' ಯಾಗಲಿ ಅದಕ್ಕೆ ದೊರೆಯಲಿಲ್ಲ. ಹಾಗೆಯೇ ವರ್ಡ್ಸ್ ವರ್ತ್ ಕಾವ್ಯರ್ಷಿ ತನ್ನ ದಿವ್ಯವಾದ ಕವನಗಳನ್ನು ಅಚ್ಚುಹಾಕಿಸಿದಾಗ ಜನರ ಅಪಹಾಸ್ಯಕ್ಕೂ ತಿರಸ್ಕಾರಕ್ಕೂ ಹೀಯಾಳಿಕೆಗೂ ಹೇಗೆ ಪಕ್ಕಾದನೆಂಬ ವಿಚಾರವನ್ನು ಇಂಗ್ಲಿಷ್ ಸಾಹಿತ್ಯ ಚರಿತ್ರೆಯನ್ನು ಓದಿದವರೆಲ್ಲ ಬಲ್ಲರು. ಕೀಟ್ಸ್ ಕವಿ ಮಹಾಕವನಗಳನ್ನು ರಚಿಸಿ ಅದೂರ ದೃಷ್ಟಿಯ ಅರಸ ಹೃದಯದ ವಿಮರ್ಶಕರ ಕ್ರೂರ ಖಂಡನೆಗೆ ಸಿಕ್ಕಿ ಎದೆನೊಂದು ಮೃತ್ಯುವಿಗೆ ತುತ್ತಾದನೆಂಬ ಪ್ರತೀತಿಯಿತ್ತು. ಅವರೆಲ್ಲರೂ ಈಗ ಮಹಾಕವಿಗಳಾಗಿದ್ದಾರೆ. ಈ ದೃಷ್ಟಾಂತಗಳನ್ನು ಪರಿಶೀಲಿಸಿ ನೋಡಿದರೆ 'ಜನಪ್ರಿಯತೆ' ಎಂತಹ ಬಿಸಿಲ್ಗುದುರೆ ಎಂಬುದು ಮನದಟ್ಟಾಗದೆ ಇರುವುದಿಲ್ಲ. ನಿಜವಾದ ಕವಿ 'ಜನಪ್ರಿಯತೆ' ಎಂಬ ಭೂತಕ್ಕೆ ಬೆದರದೆ, ಅದನ್ನು ತೃಪ್ತಿಪಡಿಸುವ ಚಪಲತೆಗೆ ಬೀಳದೆ, ತನ್ನ ಉದಾತ್ತ ದರ್ಶನಕ್ಕೆ ಮಾತ್ರ ವಿಧೇಯನಾಗಿ ಕಾವ್ಯರಚನೆ ಮಾಡುವುದು ಆತನ ಕರ್ತವ್ಯ ಮತ್ತು ಆತನ ತಾಯ್ನುಡಿ ತಾಯ್ನಾಡುಗಳ ಶ್ರೇಯಸ್ಸು.

ಜೀವನದ ಮೇಲೆ ಮೇಲೆಯೆ ತೇಲಿಹೋಗುವ ಅನೇಕರಿಗೆ ಗಹನ ವಿಷಯಗಳು ಹಿಡಿಸುವುದಿಲ್ಲ. ಆದ್ದರಿಂದ ರುಚಿಸುವುದೂ ಇಲ್ಲ. ಅಂತಹರನ್ನೂ ಕೂಡ ಅಂತರ್ಮುಖಿಗಳನ್ನಾಗಿ ಮಾಡಿ, ಬಾಳಿನ ತಿರುಳನ್ನವರು ಸವಿಯುವಂತೆ ಎಸಗುವುದು ಕವಿತೆ ತೊಟ್ಟಿರುವ ದೀಕ್ಷೆ. ವಿಜ್ಞಾನ ಶಾಸ್ತ್ರಜ್ಞನು ಹುಡಿಯೊಂದರ ಹೃದಯದಲ್ಲಿ ಸುಪ್ತವಾಗಿರುವ ಮಹಾ ಭಯಂಕರ ಶಕ್ತಿಯ ಅರಿವನ್ನು ಜನರಿಗೆ ಉಂಟುಮಾಡಿಕೊಡುವಂತೆ ಕವಿಯಾದವನು ಸಮಸ್ತ ಸೃಷ್ಟಿಯ ಅಂತರಾಳದಲ್ಲಿರುವ ಆತ್ಮದ ಆನಂದವನ್ನು ಜನರಿಗೆ ಪರಿಚಯಮಾಡಿಕೊಡಬೇಕು. ಎಂದರೆ ಹೃದಯದ ಜಡತನವನ್ನು ನೀಗುವಂತೆಯೆ ಮನಸ್ಸಿನ ಸೋಮಾರಿತನವನ್ನೂ ಪರಿಹರಿಸಬೇಕು. ಜನರೂ ಕೂಡ ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಯಾವುದಾದರೊಂದು ಕವನ ಮೊದಮೊದಲು ಅರ್ಥವಾಗದಿದ್ದರೂ ಭಾವವಾಗದಿದ್ದರೂ ಅದನ್ನು ತಿರಸ್ಕರಿಸದೆ ಸ್ವಲ್ಪ ಪ್ರಯತ್ನಪಡುವುದು ಲೇಸು. ಕವನಗಳ ರಸಾಸ್ವಾದನೆಗೆ ಕೆಲವು ಅಡಚಣೆಗಳಿವೆ. ಒಂದನೆಯದು ಭಾಷೆ; ಎರಡನೆಯದು ನೂತನ ಭಾವಗಳ ಅಪರಿಚಯತೆ; ಮೂರನೆಯದು ಬರವಣಿಗೆಯ ರಿತಿಯ ನವೀನತೆ; ನಾಲ್ಕನೆಯದು ಆಲೋಚನೆಗಳ ಗಹನತೆ; ಐದನೆಯದು ಹೊಸದರಲ್ಲಿ ಏನಿದೆ ಎಂಬೊಂದು ಕುರುಡು ಹೆಮ್ಮೆ!

ಒಂದು ಭಾಷೆ ಮಾತೃಭಾಷೆಯಾದ ಮಾತ್ರಕ್ಕೆ ಅದರಲ್ಲಿರುವ ಉತ್ತಮ ಸಾಹಿತ್ಯವೆಲ್ಲವೂ ಶ್ರಮ ಪ್ರಯತ್ನಗಳಿಲ್ಲದೆ ತಮಗೆ ಗೊತ್ತಾಗುವುದು ಎಂದು ಕೆಲವರು ತಿಳಿದುಕೊಂಡಂತೆ ತೋರುತ್ತದೆ. ಅದರಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಓದಿಕೊಂಡಿರುವ ಕೆಲವರು ಕನ್ನಡದಲ್ಲಿಯೂ ತಾವು ಪಂಡಿತರೆಂದು ಭ್ರಮಿಸಿ ತಮಗೆ ಅರ್ಥವಾಗದ ಕನ್ನಡವೆಲ್ಲ ಪಠನಾನರ್ಹವೆಂದು ಸಾರುವನಿತು ಸಾಹಸಮಾಡುತ್ತಾರೆ. ಅಂತಹ ಚಿತ್ತವೃತ್ತಿ ಅಂಧಾಭಿಮಾನಕ್ಕಲ್ಲದೆ ವಿವೇಕಕ್ಕೆ ಚಿಹ್ನೆಯಲ್ಲ. ತಮ್ಮ ಭಾಷೆಯಲ್ಲಿ ಮಾತಾಡುವ, ಕಾಗದ ಬರೆಯುವ, ಪತ್ರಿಕೆಗಳನ್ನು ಓದುವ ಶಕ್ತಿಯನ್ನು ಮಾತ್ರ ಪಡೆದಿರುವ ಆಂಗ್ಲೇಯರೆಲ್ಲರೂ ಷೇಕ್ಸ್ಪಿಯರನ ನಾಟಕಗಳನ್ನಾಗಲಿ ಮಿಲ್ಟನ್ನಿನ ಪುರಾಣ ಕಾವ್ಯವನ್ನಾಗಲಿ ವರ್ಡ್ಸ್ ವರ್ತ್, ಷೆಲ್ಲಿ ಮತ್ತು ಕೀಟ್ಸ್ ಕವಿಗಳ ಕೆಲವು ಪ್ರಸಿದ್ಧ ಕವನಗಳನ್ನಾಗಲಿ ಪ್ರಯತ್ನ ಪೂರ್ವಕವಾದ ಅಧ್ಯಯನವಿಲ್ಲದೆ ಅವುಗಳ ಮಹತ್ತನ್ನು ಅರಿಯಬಲ್ಲರೆ? ಎಂದಿಗೂ ಸಾಧ್ಯವಲ್ಲ. ವಿಜಯಶ್ರೀ ವೀರರನ್ನು ಮಾತ್ರವೆ ಒಲಿಯುವಂತೆ ಕಲಾಸುಂದರಿ ಮನಪೂರ್ವಕವಾದ ಸಾಧಕರಿಗೆ ಮಾತ್ರವೆ ಸಾಧ್ಯಳು.

ಪದ ಪರಿಚಯವೊಂದರಿಂದಲೆ ಕಾವ್ಯಖನಿಯ ವಿಪುಲೈಶ್ವರ್ಯ ಹಸ್ತಗತವಾಗದು. ಪದವು ಭಾವವು ಧರಿಸುವ ಸಂಕೇತ ರೂಪ. ಆದ್ದರಿಂದ ಭಾವಗ್ರಹಣ ಶಕ್ತಿ ಕಾವ್ಯರಸಾಸ್ವಾದನೆಗೆ ಅತ್ಯಾವಶ್ಯಕ. 'ಸಚಲನಿಘಂಟು' ಗಳಾಗಿಬಿಟ್ಟ ಮಾತ್ರಕ್ಕೆ ಕವಿಯೊಡನೆ ಅಂತರಿಕ್ಷದಲ್ಲಿ ಹಾರಾಡುವ ಸಾಮರ್ಥ್ಯ ಲಭಿಸುವುದಿಲ್ಲ. ಆದ್ದರಿಂದ ಕವಿಯ ಭಾವಗಳನ್ನು ಅನುಭವಿಸುವುದು ವಾಚಕನ ಕರ್ತವ್ಯ. ಭಾವಗಳು ಹಳೆಯವಾದರೂ ಹೊಸ ರೂಪದಿಂದ ಅವತರಿಸಿದಾಗ ಅನೇಕರಿಗೆ ಅವುಗಳ ಪರಿಚಯವಾಗುವುದಿಲ್ಲ. ಆ 'ಅಪರಿಚಯತಾಭಾಸ' ವನ್ನು ಮೊದಮೊದಲು ಸ್ವಲ್ಪ ಪ್ರಯತ್ನದಿಂದ ಪರಿಹರಿಸಿಕೊಳ್ಳಬೇಕು; – ಕೆರೆಯಲ್ಲಿಯೇ ಈಜಿದವನು ಹೊಳೆಗೆ ಈಜಲು ಹೋದಾಗ ಹೊಸ ಸನ್ನಿವೇಶಕ್ಕೆ ತಕ್ಕಂತೆ ತನ್ನ ಈಜುವಿಕೆಯನ್ನು ಹೊಂದಿಸಿಕೊಳ್ಳುವಂತೆ. ಅಲ್ಲದೆ ಎಂತಹ ವಿದ್ವಾಂಸನಾಗಲಿ, ಎಷ್ಟೇ ಪುರಾತನ ಸಾಹಿತ್ಯವನ್ನೂ ಪರಸಾಹಿತ್ಯಗಳನ್ನೂ ಅಧ್ಯಯನ ಮಾಡಿದವನಾಗಲಿ, ಭಾವಗಳೆಲ್ಲ ತನಗೆ ಹೃದ್ಗತವಾಗಿವೆ ಎಂದು ತಿಳಿಯವಷ್ಟು ಗರ್ವಿಯಾಗಬಾರದು. ಏಕೆಂದರೆ ಭಾವಗಳು ಕಾಲದಂತೆಯೆ ಅನಂತವಾಗಿವೆ; ಸೃಷ್ಟಿಯ ವಸ್ತುಗಳಂತೆ ಅಸಂಖ್ಯವಾಗಿವೆ.

ಕಾವ್ಯಾಧ್ಯಾಯಿಗೆ ಭಾಷಾಜ್ಞಾನದೊಂದಿಗೆ ಸರಸಹೃದಯ, ಸಮಾನಾನುಭವ, ಸಹಾನುಭೂತಿ ಇವು ಮೂರೂ ಇರಲೇಬೇಕು.

ಕವಿ ತನ್ನೊಂದು ಹೊಸ ಅನುಭವವನ್ನು ಕವನವೊಂದರಲ್ಲಿ ಹೇಳಿದರೆ, ಆ ಅನುಭವವಿಲ್ಲದವನಿಗೆ ಅದು ವಿಚಿತ್ರವಾಗಿ ತೋರಬಹುದು; ಅಸಾಧ್ಯವಾಗಿ ತೋರಬಹುದು. ಅಂತಹ ಸಮಯದಲ್ಲಿ ತಿರಸ್ಕಾರಕಿಂತಲೂ ಸಹಾನುಭೂತಿಯೆ ಶ್ರೇಯಸ್ಕರವಾಗುತ್ತದೆ. ಭಾವವು ಸಾಧಾರಣನಿಗೆ ಅನುಭವಾತೀತವಾಗಿರುವಂತೆಯೆ ಕವನದಲ್ಲಿರುವ ಅಲೋಚನೆಯೂ ಗಹನವಾಗಬಹದು. ಆಗ ವಾಚಕನು ಕವಿಗೆ ವಿಮರ್ಶಕನಾಗಿರುವುದಕ್ಕಿಂತಲೂ ಶಿಷ್ಯನಾಗಿ ಮುಂದುವರಿಯುವದೆ ಲೇಸು. ಏಕೆಂದರೆ, ಕವಿಯ ರಸ ತಪಸ್ಸಿಗೆ ಜಗತ್ತಿನ ನಾಡಿಗಳಲ್ಲಿ ಪ್ರವಹಿಸುವ ರಹಸ್ಯಗಳೆಲ್ಲವೂ ಅನುಭವ ವೇದ್ಯವಾಗುತ್ತವೆ. ಆ ಅತೀಂದ್ರಿಯ ಪ್ರಪಂಚದ ಅಸ್ಪಷ್ಟ ಸೂಚನೆಗಳು ಕವಿಯ ಹೃದಯದಲ್ಲಿ ಸಾಕಾರವಾಗಿ ಸಾಹಿತ್ಯರೂಪಗೊಂಡು ಸಾರ್ಥಕವಾಗುತ್ತವೆ. ಅವುಗಳನ್ನು ತಿಳಿಯುವುದೂ ಅನುಭವಿಸುವುದೂ ವಾಚಕನ ಭಾಗಕ್ಕೆ ಪುನರ್ಪರಿಚಯವಾದಂತಾಗುವುದಿಲ್ಲ; ನವ ಪರಿಚಯವಾದಂತಾಗುತ್ತದೆ. ಆದ್ದರಿಂದ ಕಾವ್ಯವಾಚಕನಿಗೆ ಸರಸ ಹೃದಯ, ಸಮಾನಾನುಭವ, ಸಹಾನುಭೂತಿ ಇವುಗಳ ಜೊತೆಗೆ ನವಾನುಭವ ಸಾಧನ ಶಕ್ತಿಯೂ, ಎಂದರೆ, ಹಳೆಯ ಅನುಭವಗಳನ್ನು ಮೆಲುಕು ಹಾಕುವ ಶಕ್ತಿಯೊಂದೇ ಅಲ್ಲದೆ ಹೊಸ ಹೊಸ ಅನುಭವಗಳನ್ನೂ ಹೊಸ ಹೊಸ ಅಲೋಚನೆಗಳನ್ನೂ ಬರಮಾಡಿಕೊಳ್ಳುವ ಶಕ್ತಿಯೂ ಇರಬೇಕು. ಇದು ಸಾಧ್ಯವಾಗಬೇಕಾದರೆ ಪುರಾತನದಲ್ಲಿರುವ ಅಂಧ ಪುರಸ್ಕಾರವು ನೂತನದಲ್ಲಿರುವ ಮಂದ ತಿರಸ್ಕಾರವು ಮನಸ್ಸಿನಿಂದ ತೊಲಗಬೇಕು.

ಕಲಾಸುಂದರಿ ಆತ್ಮಾಹ್ಲಾದಕಾರಿಣಿಯೂ ಹೌದು, ಆತ್ಮೋದ್ಧಾರಕಾರಿಣಿಯೂ ಹೌದು: ಎಂಬ ತತ್ತ್ವ ಈ ಕವನಗಳನ್ನೋದುವುದರಿಂದ ಸಹೃದಯಾನುಭವ ಗೊಚರವಾದರೆ ಕವಿಯ ತಪಸ್ಸು ಸಿದ್ಧಿಸಿತೆಂದು ಭಾವಿಸಿ ಸಂತೃಪ್ತನಾಗುತ್ತೇನೆ.

## ಪಂಕಜ

ಕಾಡಿನ ಮೂಲೆಯ ಕೆರೆಯ ಕೆಸರಿನಲಿ
ಮೂಡಿದ ಹೂವಿನು ನೀ ಕೊಯ್ದೆ;
ಕರುಣದಿ ಕೃಪೆಯಲಿ ಕೊರಳ ಹಾರದಲಿ
ಪ್ರೇಮದಿ ಚುಂಬಿಸಿ ನೀ ನೆಯ್ದೆ!

ಯಾರೂ ನೋಡದೆ ಬಾಡುವ ಹೂವಿದು
ನಾಡಿನ ಕಣ್ಣೀಗೆ ಕಣ್ಣಾಯ್ತು;

# ನಿನ್ನ ವಾಣಿ

ನೀನಂದು ಹಾಡೆಂದು ಕಲಿಸಿ ಕಳುಹಿದ ಗೀತೆ
ಬಾರದಿದೆ ನನಗಿನ್ನುಮಿಂದುವರೆಗೆ.
ಹಾಡಲದನೆಳಸಿದರೆ ಬೇರೆ ಬೇರೆನಿತೆನಿತೊ
ಗೀತೆ ಚಿಮ್ಮುತಿವೆ; ಬಯಸಿದುದೆ ಹೊರಗೆ!

ಹಸುರಿನಲಿ ಹೊಳೆವ ಹನಿ ರಾಶಿ ರಾಶಿಯ ಸೂಸಿ
ಹೊನ್ನ ಸಿಂಗಾರದಲಿ ಬಹುದು ಸುಸಿಲು;
ಬನದ ತಳಿರಿಗೆ ಬಳಿದು ಕುಂಕುಮದ ಬಣ್ಣವನೆ
ಮೋಹವನೆ ಚಿಮ್ಮುವುದು ಬೈಗು ಬಿಸಿಲು.

ಪಕ್ಷಿಗಳ ಕೂಜನದಿ ಪುಷ್ಪನೀರಾಜನದಿ
ಸಾಗುತಿದೆ ಮಧು ಚೈತ್ರ ಮಧುರ ಯಾತ್ರೆ.
ಸುಖಮಯದ ಗಾನದಲಿ ದುಃಖದುಮ್ಮಾನದಲಿ
ಜಾರುತಿದೆ ಜಗದ ಜೀವನದ ಜಾತ್ರೆ.

ಕವಿಯ ಗಾನದೊಳೆಲ್ಲ ವಾಣಿಗಳು ಹೊಮ್ಮುತಿವೆ;
ಹೊಮ್ಮದಿದೆ ನೀ ಕಲಿಸಿದೊಂದು ವಾಣಿ!
ಉಲಿವೆನೆಂದರೆ ಇತರ ನೂರಾರು ವಾಣಿಗಳು
ನುಗ್ಗುತಿವೆ; ಬಾರದಿದೆ ನಿನ್ನ ವಾಣಿ!

೧೦-೧೧-೧೯೩೧

# ಪಲ್ಲವಿ

ಕೇಳುವುದೆಲ್ಲೆಡೆ ಪಲ್ಲವಿಯೊಂದು:
ನೀ ನಾ, ನಾ ನೀ, ಜೋ ಜೋ ಎಂದು!

ಎಲ್ಲಾ ಕವಿಗಳ ಕವನಗಳೆದೆಯಲಿ,
ಸೂರ್ಯ ಚಂದ್ರರ ಅಸ್ತ ಉದಯದಲಿ,

ಎಲ್ಲಾ ಸುಖದುಃಖಗಳಾಳದಲಿ,
ಸರುವ ಧರುಮಗಳ ಸರಮೇಳದಲಿ;

ಹಾಡುವ ಹಕ್ಕಿಗಳಿನಿದನಿಯಲ್ಲಿ,
ತೀಡುವ ಗಾಳಿಯ ಸುಯ್ಯುಸಿರಲ್ಲಿ,
ಉರಿಯುವ ಕಡುಬೇಸಗೆ ಬನದಲ್ಲಿ
ತರಗಲೆಗಳ ಚಿರ ಮರ್ಮರದಲ್ಲಿ;

ತಿಳಿಗೊಳದಲಿ ತೆರೆ 'ನೀ ನಾ' ಎಂದು
ಕರೆ ಕರೆಯುವುದು ದಡದೆಡಗೈತಂದು;
ಹರಿ ಹೊಳೆಯಲಿ ಮೊರೆ 'ನಾ ನೀ' ಎಂದು
ಸರಿ ಸರಿವುದು ನೊರೆಗರೆಯುತೆ ಮುಂದು.

ಇನ ಶಶಿ ತಾರಾ ಗ್ರಹಗತಿಯೆಲ್ಲ
ಆಡುತಲಿಹವಾ ಪಲ್ಲವಿ ಸೊಲ್ಲ;
ಸಚರಾಚರದಣುರೇಣಿನ ವಾಣಿ
ಆಲಾಪಿಸುತಿದೆ 'ನೀ ನಾ, ನಾ ನೀ!'

೨೩-೦೮-೧೯೩೧

## ಏಕೆ

ನೀರದೇಕೆ ಹರಿವುದು?
ಹರಿವುದು!
ಕಡಲ ಸೇರಲಲ್ಲವೆ?
ಸೇರ್ವುದು!
ಆದರೇನು?
ಕಡಲ ಸೇರಲೆಂದು ನೀರು
ಹರಿವುದಿಲ್ಲ;
ಹರಿಯೆ ಕಡಲ ಸೇರ್ವುದಷ್ಟೆ,
ಬೇರೆಯಲ್ಲ!

ಬೆಂಕಿಯೇಕೆ ಉರಿವುದು?
ಉರಿವುದು!
ಕೂಳು ಬೇಯಲಲ್ಲವೆ?
ಬೇಯ್ವುದು!
ಆದರೇನು?
ಕೂಳು ಬೇಯಲೆಂದು ಬೆಂಕಿ
ಉರಿವುದಿಲ್ಲ;
ಉರಿಯೆ ಕೂಳು ಬೆಯ್ಯುದಷ್ಟೆ,
ಬೇರೆಯಲ್ಲ!

ನೇಸರೇಕೆ ಹೊಳೆವುದು?
ಹೊಳೆವುದು!
ತಿರೆಯ ಬೆಲಗಲಲ್ಲವೆ?
ಹೌದದು!
ಆದರೇನು?
ತಿರೆಯ ಬೆಳಗಲೆಂದು ರವಿಯು
ಹೊಳೆವುದಿಲ್ಲ;
ಹೊಳೆಯೆ, ತಿರೆಯು ಹೊಳೆವುದಷ್ಟೆ,
ಬೇರೆಯಲ್ಲ!

ಸೃಷ್ಟಿಯೇಕೆ ಜನಿಸಿತು?
ಜನಿಸಿತು!
ಕರ್ಮ ಸಮೆಯಲಲ್ಲವೆ?
ಸಮೆವುದು!
ಆದರೇನು?
ಕರ್ಮ ಸಮೆಯಲೆಂದು ಸೃಷ್ಟಿ
ಜನಿಸಲಿಲ್ಲ;
ಜನಿಸೆ, ಕರ್ಮ ಸಮೆವುದಷ್ಟೆ,
ಬೇರೆಯಲ್ಲ!

೧೨-೦೨-೧೯೩೧

## ಬಿದಿ ಕಮ್ಮಾರನು

ಬಿದಿ ಕಮ್ಮಾರನು; ಲೋಕವೆ ಕುಲುಮೆ.
ದುಃಖದ ಬೆಂಕಿಯ ಹೊತ್ತಿಸಿ ಊದಿ
ಕಾಯಿಸಿ ಬಡಿಯಲು ಪಾಪದ ಚಿಲುಮೆ
ಕಿಡಿ ಕಿಡಿ ಚಿಮ್ಮುತ ಕಡೆಯಲಿ ಬೂದಿ!
ಆಗಿದೆ ಎರಕದ ಕಬ್ಬಿಣ ಉಕ್ಕು;
ಹೋಗಿದೆ ಜೀವದ ಕತ್ತಿಯ ತುಕ್ಕು;
ಕಾವಿರುವಾಗಲೆ ಡೊಂಕನು ತಿದ್ದಿ,
ಶಾಂತಿಯ ಶೀತಲ ಜಲದಲ್ಲಿ ಅದ್ದಿ
ಹದಕೊಡುತಿರೆ ಮಾಡುವುದದು ಸದ್ದ!
ಕಡೆಯಲಿ ಸದ್ದಿಲ್ಲದೆ ಅದು ಸಿದ್ಧ!

೦೫-೧೦-೧೯೩೧

## ತಾಯಿಯ ಮಡಿಲು

ಹಗಲೆಲ್ಲ ದೂಳಿನಲಿ ಗೊಂಬೆಯಾಟವನಾಡಿ
ಇರುಳು ಬರೆ ಮಲಗುವೆನು ನಿನ್ನ ಮಡಿಲಿನಲಿ.
ನಿನ್ನ ಬೆಚ್ಚನೆ ಎದೆಯ ಸಜ್ಜೆಯಲಿ ಸೊದೆಯುಂಡು
ನಿನ್ನ ಜೋಗುಳದುಲಿಗೆ ಕಣ್ಣು ಮುಚ್ಚುವೆನು.

ದಿನದ ಲೀಲೆಯ ಮರೆವೆ; ಬಿಸಿಲು ದಣಿವನು ಮರೆವೆ;
ಭೂಮಿ ಆಕಾಶಗಳನೆಲ್ಲ ಮರೆಯುವೆನು.
ಕೆಳೆ ಹಗೆಗಳೆಂಬುವನು, ಸೋಲು ಗೆಲುವುಗಳನ್ನು
ನಿನ್ನ ಮಡಿಲಿನ ನಿದ್ದೆ ನುಂಗಿ ನೊಣೆಯುವುದು.

೧೮-೧೧-೧೯೩೧

# ಸೆರೆ

ಬುವಿಯು ಸೆರೆಮನೆಯೆಂದು
ನಾನು ಸೆರೆಯಾಳೆಂದು
ಬರಿದೆ ಭಾವಿಸಿ ಮರುಗಿ
ಕೊರಗುತಿದ್ದೆ!
ಸೆರೆಮನೆಯ ಬಿತ್ತರವ
ಚರಿಸಲಾರೆನು ನಾನು!
ಬಿಡುಗಡೆಯ ಬಿತ್ತರವ
ಮಾಳ್ಪುದೇನು?

ಕಾಲದೇಶಗಳೆಂಬ
ಕಣ್ಣಿಯಲಿ ನೆಯ್ದಿರುವ
ಮಾಯಜಾಲದ ಕಣ್ಣ-
ಳಗಲವೆನಿತು?
ಜೀವವೆಂಬುವ ಕಿರಿಯ
ಮೀನು ಆ ಬಲೆಯಲ್ಲಿ
ಸಿಲುಕದೆಯ ನುಸುಳಿ ನಲಿ-
ದಾಡಬಹುದು!

ಪಂಜರದ ಮೇರೆಯನೆ
ಸಂಚರಿಸಲಾರದಿಹ
ಗಿಳಿಗೆ ಬನಗಳ ಬಯಲ
ಬಯಕೆಯೇಕೆ?
ಸೆರೆಮನೆಯ ಕಿರಿತನವ
ಬಳಸಲಾರದ ನನಗೆ
ಬಿಡುಗಡೆಯ ಬಿತ್ತರವೆ
ಹಿರಿಯ ಸೆರೆಯು!

೧೧-೦೪-೧೯೧೯

ಹೇ ಗುರುದೇವನೆ, ನಿನ್ನ ಪರುಸದಲಿ
ಗೋಡದ ಮಣ್ಣಿದು ಹೊನ್ನಾಯ್ತು!

ಪಂಕಜವಿದು ನಿನ್ನೆದೆಯೊಳೆಯೆ ಸದಾ
ಮಾಸದ ಹಾಸದಿ ನಲಿದಿರಲಿ!
ಸೌಂದರ ಸೌರಭಗಳು ದಿನದಿನದಲಿ
ಹೆಚ್ಚುತ ಅಚ್ಯುತವಾಗಿರಲಿ!

೩೦-೧೧-೧೯೩೨

ಮೈಸೂರು,
೦೯-೦೭-೧೯೩೩.

## ಕಲ್ಲು

ನನ್ನ ಕೈಯಲ್ಲಿರುವ ಕಲ್ಲಿಗೆ
ಬಗೆಗೆ ಸಿಲುಕಿದ ಮನಸಿದೆ;
ನಿದ್ದೆಗೈವಿದರಂತರಂಗದಿ
ಹಾವಿನಂತಹ ಕನಸಿದೆ.

ನೋಡಲರಿಯದು, ಹಾಡಲರಿಯದು,
ನಿದ್ದೆಮಾಡುತ ಬಿದ್ದಿದೆ;
ಮೇಲುನೋಟಕೆ ಸಾಧುಶಿಲೆಯಿದು,
ಕಲ್ಕಿ ಹೃದಯದೊಳೆದ್ದಿದೆ!

ಎದೆಯೊಳಣುಗಳು ಹಾಸು ಹೊಕ್ಕಿವೆ,
ಚಿಮ್ಮಿ ಮುಳುಗಿವೆ ಸುತ್ತಿವೆ.
ತಿಮಿರ ಗರ್ಭದಿ ಹೊಮ್ಮಿ ಘೂರ್ಣಿಸಿ
ಮುದ್ದು ಮುತ್ತಿಗೆ ಮುತ್ತಿವೆ.

ನಲಿದು ನರ್ತಿಸಿ, ತಪದಿ ವರ್ತಿಸಿ,
ಮುಕ್ತಿಯೆಳೆತಕೆ ಸಿಕ್ಕಿವೆ.
ರೇಣು ರೇಣಿನ ಹದುಳ ತಕ್ಕೆಗೆ
ಲೋಕಗಳೆ ಮರೆಹೊಕ್ಕಿವೆ!

ವಿದ್ಯುದಣುಗಳು ನರಳಿ, ಕಂಪಿಸಿ,
ತೊಳತೊಳಲಿ ಮೊಳಗುತ್ತಿವೆ!
ಸತ್ತ ಕಲ್ಲಿದನೆತ್ತಿದಾನು ಸ
ಜೀವ ಸಮರವನೆತ್ತಿಹೆ!

ನಡುಗಲರಿಯದು, ಸಿಡಿಯಲರಿಯದು,
ಸೇರಲರಿಯದು ಪುಡಿಯಲಿ:
ಕುಣಿವಣುಗಳಿವೆ ರೂಪ ವೇಷದ
ದಿವ್ಯ ಹಸ್ತದ ಹಿಡಿಯಲಿ!

ಚಲಿಸದಾ ಕೈ! ಸುಮ್ಮನಿರುವುದು;
ಹಿಡಿದ ಮುಷ್ಟಿಯ ತೆರೆಯದು.
ಎದೆಯೊಳಣುಗಳ ಕದನ ನಿಂತಿದೆ!
ಜಡವು ಚೇತನದಂಗಿಯುಂತಿದೆ!
ಮಾಯೆಯೊಡ್ಡಿದ ಸೆರೆಯಿದು!

ನಮ್ಮ ಲೋಕದ ತಿರುಳು ತಿಳಿಯದು:
ಮಾಯೆವೆಣ್ಗೆದು ತೊಟ್ಟಿಲು!
ಹಿಂದೆ ಕಲ್ಗಳೆ ಮೆಟ್ಟಲಾದೆನ
ಗಿಂದು ಸೊನ್ನೆಯೆ ಮೆಟ್ಟಲು!
ಚೇತನವೆ ಕಲ್ಮೆಟ್ಟಲು!*

೦೨-೦೬-೧೯೩೦

---

* Anna Hempstead Branc ದ ಎಂಬಾಕೆಯ ಇಂಗ್ಲಿಷ್ ಕವನದ ಅನುವಾದ.

## ಶಿಲಾ ತಪಸ್ವಿ

ವ್ಯೋಮ ಮಂಡಿತ ಸಹ್ಯಶೈಲಾಗ್ರದಡವಿಯಲಿ
ಸಂಚರಿಸುತಿರೆ, ಸಂಜೆ ಪಶ್ಚಿಮ ದಿಗಂತದಲಿ
ಕೆನ್ನಗೆಯ ಬೀರಿತ್ತು. ರವಿ ಮುಳುಗುತಿರ್ದಂ;
ಅಸ್ತಗಿರಿ ಚೂಡಸ್ಥ ತಪ್ತ ಬಿಂಬಾರ್ಧಂ
ರಕ್ತಸಿಕ್ತಾಂಬರದ ಹೇಮ ಜೀಮೂತದಲಿ
ಮಿಂಚಿನಂಚನು ನೆಯ್ದು, ರಕ್ತಕಾಂತಿಯ ಹೊಯ್ದು,
ಶೋಭಿಸಿತು. ಸಂಧ್ಯೆಯಾ ಶೋಣಿತ ಸ್ರೋತದಲಿ
ಮಿಂದ ಮುಗಿಲೆಸೆದತ್ತು. ಪೂರ್ವಯುಗದಲಿ ಪಿಂತೆ
ರಕ್ಕಸನ ಹೀರ್ದ ನರಹರಿಯ ನಾಲಗೆಯಂತೆ!
ಬೈಗುಗೆಂಪನು ಹೊದೆದ ಬಿತ್ತರದರಣ್ಯಂ
ಪರ್ವತಧ್ಯಾನದಲಿ ಮುಳುಗಿತ್ತು. ಧನ್ಯಂ
ನಾನೆಂದು ತೇಲುತಿರೆ ಸೌಂದರ್ಯಪೂರದಲಿ,
ಯಾವುದೋ ಭವ್ಯತರ ಸಾನ್ನಿಧ್ಯಭಾರದಲಿ,
ಕೇಳಿಸಿತು ದನಿಯೊಂದು; ಕಾಣಿಸಿತು ದೂರದಲಿ
ಶಿಲೆಯೊಂದು ಮೊರಡಾದ ಮನುಜನಾಕಾರದಲಿ.
ಆ ಶಿಲಾ ಶೈಲತಪಸಿಯು ಕರೆಯುತೆನ್ನಂ
ನುಡಿದುದಿಂತೆಂದು: ಓ ಕಬ್ಬಿಗನೆ, ತನ್ನಂ
ಕಲ್ಲು ಕರೆಯಿತು ಎಂದು ಬೆಚ್ಚದಿರು. ಮುನ್ನಂ,
ಶತಶತ ಸಹಸ್ರ ಶತಮಾನಗಳ ಮುನ್ನಂ
ನಾವಿರ್ವರೊಂದೆ ಬಸಿರಿಂ ಬಂದು ಲೀಲೆಯಲಿ
ಮುಳುಗಿದೆವು ಸಂಸಾರ ಮಾಯಾಗ್ನಿ ಜ್ವಾಲೆಯಲಿ.
ನೀನು ಮರೆತಿರಬಹುದು, ಚೇತನದ ಸುಖದೊಳಿಹೆ;
ನಾನು ಮರೆತಿಲ್ಲದನು, ಜಡತನದ ಸೆರೆಯೊಳಿಹೆ!

ಆ ಕಲ್ಲುಕಿತ್ತಡಿಯ ಹೊರೆಗಾಗಿ ನಡೆಯುತ್ತೆ
ನಿಂತೆನಾಶ್ಚರ್ಯದಲಿ. ಮೂರುತಿಯು ನುಡಿಯುತ್ತೆ
ನುಡಿಯುತ್ತೆ ಕಣ್ಣೀರು ಕರೆವುದನು ಕಂಡೆ:
ಹರಳುಗಂಬನಿಯುರುಳಿಸಲುತಿತ್ತು ಬಂಡೆ!

ನೋವೆಲ್ಲ ಹೊನಲು ಹರಿವಂದದಲಿ ವಾಣಿ
ತುಂಬಿತಾಕಾಶವನು; ಗಿರಿವನಶ್ರೇಣಿ
ಮರುಗಿದುದು ಮೌನದಲಿ ಅನುಕಂಪವನು ತೋರಿ.
ಅಸ್ತಮಿಪ ಬೆಳಕಿನಲಿ ದೀರ್ಘಛಾಯೆಯ ಬೀರಿ
ಬಳಿಯ ಮರಗಳು ನಿಂತುವಾಲೈಸಿ. ನಿಂತು
ಕೇಳುತಿರಲಾ ಕಲ್ಲು ಮುಂಬರಿಯಿತಿಂತು:
ಕಾಲವಲ್ಲಿರಲಿಲ್ಲಿ; ದೇಶವಲ್ಲಿರಲಿಲ್ಲಿ;
ಗ್ರಹಕೋಟಿ ಶಶಿಸೂರ್ಯ ತಾರಕೆಗಳಿರಲಿಲ್ಲ;
ಬೆಳಕು ಕತ್ತಲೆ ಎಂಬ ಭೇದವಿನಿತಿರಲಿಲ್ಲ.
ಮಮಕಾರ ಶೂನ್ಯದಲಿ ಮುಳುಗಿದ್ದುವೆಲ್ಲ!
ಮೂಡಿದುದು ಮೊದಲು ಮಮಕಾರವೆಂಬುವ ಮಾಯೆ;
ಬೆಂಕೊಂಡು ತೋರಿದುದು ಸೃಷ್ಟಿ ಎಂಬುವ ಛಾಯೆ.
ಕಾಲದೇಶದ ಕಡಲ ಕಡೆಹದಲಿ ಸಿಕ್ಕಿ
ಆದಿಮ ಲಯಾಗ್ನಿ ಹೊರಹೊಮ್ಮಿದುದು. ಉಕ್ಕಿ
ಸುತ್ತಿದುದು; ಚಿಮ್ಮಿದುದು ದೆಸೆದೆಸೆದೆಸೆಗೆ ಹಬ್ಬಿ
ಘೂರ್ಣಿಸುತೆ ವಿಶ್ವದ ಅನಂತತೆಯನೇ ತಬ್ಬಿ.
ಓ ಕವಿಯೆ, ಆ ಭೀಷ್ಮ ಲಯಶಿಖಿ ಪ್ರವಾಹದಲಿ,
ನಿದ್ದೆಯಿಂದೆದ್ದಾ ಪರಬ್ರಹ್ಮದೇಹದಲಿ,
ಆ ಮಹಾ ಉಜ್ವಲ ಪ್ರೇಮ ಘನವಹ್ನಿಯಲಿ,
ಸದ್ಯಃಪ್ರಫುಲ್ಲ ಕಲ್ಪಾದಿ ಪ್ರತಿಭೆಯಲ್ಲಿ
ಕನಸಿನಲಿ ಸಂಚರಿಪ ಚಿತ್ರಸಂಕುಲದಂತೆ,
ಮಂಥನದಿ ಮೂಡಿಬಹ ಜಲಬುದ್ಬುದಗಳಂತೆ,
ಕವಿಮನದಿ ಮಿಂಚಿಬಹ ಭಾವಮಂಜರಿಯಂತೆ,
ಮರುಮರೀಚಿಕೆಯಲ್ಲಿ ನರ್ತಿಸುವಲೆಗಳಂತೆ,
ವೈಣಿಕನ ಸ್ವರ ಸ್ವರ್ಗ ಸೋಪಾನ ಶ್ರೀಯಂತೆ
ಆ ವಿಶ್ವಕಾವ್ಯದಸ್ಪಷ್ಟ ಪೂರ್ಣತೆಯಲ್ಲಿ,
ಸ್ಪಷ್ಟವ್ಯಕ್ತಿತ್ವದಾಕಾಂಕ್ಷೆಯಿಂ, ನಿಂದಲ್ಲಿ
ನಿಲದೆ ಸಂಚರಿಸಿದೆವು ಆ ಅಗ್ನಿಜಲದಲ್ಲಿ:
ನೋಡಿನ್ನುಮಿರ್ಪುದಾ ಕಲೆ ನನ್ನ ಎದೆಯಲ್ಲಿ!

ಮೌನದಲಿ ನಿಂತಾ ಮಹಾಚಲಶ್ರೇಣಿ
ಆಲಿಸಿತು ತನಗದು ಪ್ರತಿನಿಧಿಯ ವಾಣಿ
ಎಂಬಂತೆ. ಭೀಮಗಿರಿ ಶಿಖರಗಳ ಕರಿನೆರಳು
ಹೊನಲಾಗಿ ಹರಿದುದು ಕಣಿವೆಯೊಳಗೆ. ಮುನ್ನಿರುಳು
ಮೆಲುಮೆಲನೆ ನಾಡನಾಲಿಂಗಿಸಿತು. ಸದ್ದು
ಕರಗುತಿದ್ದುದು ನಿದ್ದೆಗಡಲಿನಲಿ ಬಿದ್ದು.
ಭೂಗೋಲ ಭೀಮ ಛಾಯಾ ಸ್ತೂಪ ಚೂಡಂ
ಆಕಾಶದೇಶದಲಿ ಕರಿದೆರೆಯ ಬೀಡಂ
ತಿಮಿರರಾಣಿಗೆ ರಚಿಸಿದತ್ತು; ಪಟಶಾಲೆಯಲಿ
ತಾರೆಗಳ ಕೆತ್ತತೊಡಗಿತು ಮಾಲೆಮಾಲೆಯಲಿ!
ನೋಡೆಂದು ಶಿಲೆಯು ಬೆಸಗೊಳೆ ನೋಡಿ ಬೆಚ್ಚಿದನು;
ಕಲ್ಪಾದಿಯಗ್ನಿಯನು ಕಂಡು ಕಣ್ ಮುಚ್ಚಿದೆನು!
ಆ ಸನಾತನ ಶೈಲತಪಸಿಯೆದೆಯಾಳದಲಿ
ಯುಗಯುಗಗಳಿನ್ನುಮವಿತಿಹವಲ್ಲಿ. ನಾಳದಲಿ
ನಾಳದಲಿ ಕಲ್ಪಗಳು ಆತ್ಮಕಥೆ ಹೇಳುತಿವೆ;
ಹಿಂದುಮುಂದೊಂದರಿಯದಿಂದಿನೊಳೆ ಬಾಳುತಿವೆ
ಕಾಲದೇಶಾದಿ ಪರಿಣಾಮ ಕೋಟಿಗಳಲ್ಲಿ.
ಮರಳಿ ನುಡಿ ತೊಡಗಿತಿಂತಾ ಶಿಲೆಯ ಸೆರೆಯಲ್ಲಿ:

ಇಂತಿರಲು, ನೀರಿನಲಿ ತೇದ ಮಿಂಚಿನ ತೆರದಿ,
ಬಂಧನವ ಹರಿಯಲೆಳಸುವ ಕೇಸರಿಯ ತೆರದಿ,
ಹರಿದು ಭೋರಿಡುವ ಆ ಅಗ್ನಿಪ್ರವಾಹಂ
ದಿಕ್ಕುದಿಕ್ಕಿಗೆ ಸಿಡಿದೊಡೆದು, ದೇಶದೇಹಂ
ಗಹಭೂಮಿ ಶಶಿಸೂರ್ಯ ತಾರಾಖಚಿತಮಾಯ್ತು.
ನನಗೆ ಈ ಭೂಗರ್ಭವೇ ಸೆರೆಯ ಮನೆಯಾಯ್ತು!
ಕಲ್ಪಕಲ್ಪಗಳಿಂದ ನಾನಲ್ಲಿ ಸೆರೆಯಾಗಿ
ನರಳಿದೆನು ಕತ್ತಲಲಿ. ಜ್ಯೋತಿದರ್ಶನಕಾಗಿ
ಮೊರೆಯಿಟ್ಟು ಕೂಗುತಿರೆ, ಕಲ್ಲೆನಗೆ ಮೈಯಾಗಿ
ಕಡೆಗಿಲ್ಲಿ ನೆಲೆಸಿದೆನು. ಇರೆಯಿರೆ ಕ್ರಮವಾಗಿ
ನನ್ನ ಸೋದರರೆಲ್ಲ ಮರಗಿಡಗಳಂದದಲಿ

ಮೂಡಿದರು; ಉಸಿರೆಳೆದು ಬೆಳೆಬೆಳೆದು ಚಂದದಲಿ
ನಲಿದಾಡಿದರು; ಕೆಲರು ಸ್ವಪ್ನವನು ಸೀಳಿ
ತಿರುಗಾಡಿದರು ಪ್ರಾಣಿರೂಪವನು ತಾಳಿ;
ಮೆಲಮೆಲ್ಲನೆ ಕೆಲರು ನರರಾಕೃತಿಯ ತಳೆದು
ತಪ್ಪು ಹಾದಿಯೊಳೆನಿತೊ ಶತಮಾನಗಳ ಕಳೆದು
ನಾಗರಿಕರಾದರೈ ಬುದ್ಧಿಶಕ್ತಿಯ ತೋರಿ!
(ಹಾ! ದೂರವಿಹುದಿನ್ನುಮೆನಗೆ ನಡೆಯುವ ದಾರಿ!)
ಗಗನದಲಿ ಕಾಣುವಾ ತಾರೆಗಳಲೆಲ್ಲಿಯೂ
ತಿರುಗಿಹೆನು; ಆದರೇನವುಗಳಲಿ ಎಲ್ಲಿಯೂ
ಕ್ರಿಮಿಯೊಂದರಲ್ಲಿರುವ ಚೇತನದ ಕಣವಿಲ್ಲ;
ಸ್ವೇಚ್ಛೆಯೆಂಬುವುದಿಲ್ಲ; ಕಡೆಗೊಂದು ತೃಣವಿಲ್ಲ!
ಈ ಭೂಮಿಯೊಂದು ಕ್ರಿಮಿ ಕ್ಷಣಜೀವಿಯಾದರೂ
ತಾರೆಗಳ ಮೀರಿಹುದು: ಯುಗಜೀವಿಯಾದರೂ
ತನ್ನಿಚ್ಛೆ ಏನೆಂಬುದರಿಯದಿಹ ದಾಸ್ಯಂ
ಸಾವಿಗೆಣೆ. ನೇಸರ್ಗೆ ಕ್ರಿಮಿಗಿರಿದ ದಾಸ್ಯಂ!
ಎಲ್ಲ ಜಡತೆಯ ಬಯಕೆ ಚೈತನ್ಯಸಿದ್ಧಿಯೈ.
ಈ ರಹಸ್ಯವನರಿತ ಮಾನವನೆ ಬುದ್ಧನೈ! –

ಆ ಶಿಲಾತಪಸಿಯುಪದೇಶವನು ಕೇಳುತ್ತೆ
ನಿಷ್ಪಂದನಾದೆನಾವೇಶವನು ತಾಳುತ್ತೆ.
ಶಿಲೆಯೆ ಕವಿ; ಕವಿಯೆ ಶಿಲೆ; ಅದೆ ತತ್ವಬೋಧೆ!
ಕಲ್ಲೆನಗೆ ಗುರುವಾಯ್ತು; ನಾ ಶಿಷ್ಯನಾದೆ.
ಮೇಲೆ ನಭದಲಿ ತಾರೆ ಸಾಕ್ಷಿಕಾಂತಿಯ ಬೀರಿ
ಮಿಣುಕಿದುವು. ಕೆಳಗೆ ಕತ್ತಲು ಸಂಶಯವ ತೋರಿ
ಮುಸುಗಿತ್ತು. –

ಓ ಕಬ್ಬಿಗನೆ, ಸೋದರನೆ ಕೇಳು:
ನಾನು ಈ ಕಲ್ಲಿನಲ್ಲಿ ಸೆರೆಸಿಕ್ಕಿರಲು, ಹಾಳು
ಜಡತನಕೆ ಬೇಸತ್ತು ಜೀವವನು ಬಯಸುತ್ತೆ
ಮರುಗುತಿರೆ, ಶಿಲ್ಪಿಯೊರ್ವನು ಇಲ್ಲಿ ತಿರುಗುತ್ತೆ
ಬಂದು, ಮರುಗುತೆ ನನಗೆ, ಬಂಡೆಯನು ಕಡೆದು

ಬಿಡಿಸಿದನು. ನಾನು ಈ ರೂಪವನು ಪಡೆದು
ಕಲೆಯ ಸಾನ್ನಿಧ್ಯದಲಿ ಒಂದಿನಿತು ಕಣ್ದೆರೆದು,
ಪೂರ್ವಬಂಧದ ಶಿಲಾಕ್ಲೇಶವನು ನಸುತೊರೆದು
ಚೇತನದ ಛಾಯೆಯನು ಸವಿಯುತೊಡಗಿದೆನಂದು.
(ಕಲ್ಗೆ ಕಣ್ಣಿತ್ತ ಆ ಕಲೆಯೆನಗತುಲ ಬಂಧು!)
ಕಲೆಯ ಕಣ್ಣಿರದ ನರರಿಗೆ ನಾನು ಬರಿ ಕಲ್ಲು;
ಕವಿಯನುಳಿದಾರಿಗೂ ಕೇಳದೆನ್ನೀ ಸೊಲ್ಲು!
ನಾನು ರವಿಯುದಯವನು ನೋಡಿ ನಲಿಯಲು ಬಲ್ಲೆ:
ಬನದ ಬೆಟ್ಟದ ನೆತ್ತಿಯಲಿ ತಿಂಗಳು ನಿಲ್ಲೆ,
ಹುಣ್ಣಿಮೆಯ ತಿಳಿಬಾನು ಬೆಳ್ದಿಂಗಳನು ಚೆಲ್ಲೆ,
ಭಾವದಲೆಗಳು ನನ್ನ ರಕ್ತನಾಳಗಳಲ್ಲಿ
ಮೊರೆಯುವುವು ಸೌಂದರ್ಯದಾನಂದಭರದಲ್ಲಿ!
ನಿನ್ನಂತೆಯೇ ನಾನು ಕೋಗಿಲೆಯ ದನಿಗೇಳಿ
ಮುದವ ತಾಳಲು ಬಲ್ಲೆ; ಬೀಸಿಬರೆ ತೆಂಗಾಳಿ
ಮೈಯೊಡ್ಡಿ ಬೇಗೆಯನು ಪರಿಹರಿಸಿಕೊಳಬಲ್ಲೆ!
ಈ ವಿಶ್ವವೆಲ್ಲವನು ನಿನ್ನಂತೆ ನಿಂತಲ್ಲೆ
ಕಲ್ಪನೆಯ ತಕ್ಕೆಯಲೆ ತಬ್ಬಿ ಸಾಯಲು ಬಲ್ಲೆ!
ಆದರೂ ನನಗಿನ್ನೂ ನಿನ್ನರವು ಬಂದಿಲ್ಲ;
ಅದಕಾಗಿ ತಪವಗೈಯುತ್ತಿಹೆನು. ಒಂದಿಲ್ಲ
ಒಂದು ದಿನ ಮುಂದೆ ನಿನ್ನಂತೆ ತಿರುಗಾಡುವೆನು;
ಕವಿಯಾಗಿ ಕನ್ನಡದ ಕವನಗಳ ಮಾಡುವೆನು;
ಮಾಡಿ, ನಿನ್ನಂತೆಯೇ ಜನಗಳಿಗೆ ಹಾಡುವೆನು!
ಅದಕಾಗಿ, ಓ ಕವಿಯೆ, ನಿನ್ನ ನೆರವನು ಬೇಡಿ
ಕರೆದೆನಿಂದೀಯೆಡೆಗೆ; ನೀನಿಲ್ಲಿಗೈತಂದು
ನಿತ್ಯವೂ ನನಗಾಗಿ ನಿನ್ನ ರಚನೆಯ ಹಾಡಿ
ಕಲೆಯ ಸಾನ್ನಿಧ್ಯದಿಂದೆನಗೆ ನರತನ ಬಂದು,
ನಿನ್ನಂತೆಯೇ ನಾನು ಚೇತನದ ಮುಕ್ತಿಯಂ!
ಪಡೆದು ನಲಿವಂದದಲಿ ನೀಡೆನಗೆ ಶಕ್ತಿಯಂ!
ಓ ಕಬ್ಬಿಗನೆ, ನಿನ್ನೊಳಿಹ ಕಲೆಗೆ ಶಕ್ತಿಯಿದೆ.
ಜಡವ ಚೇತನಗೊಳಿಪ ದಿವ್ಯತರ ಮುಕ್ತಿಯಿದೆ.

ಮನುಜರಿಗೆ ಸೊಗಮೀವ ಕರ್ತವ್ಯವೊಂದೆ
ನಿನ್ನೆದೆಂದರಿಯದಿರು; ನಿನ್ನ ಕಲೆಯಿಂದೆ
ನೂರಾರು ಆತ್ಮಗಳು ಜಡತನದ ಬಲೆಯಿಂದೆ
ಬಿಡುಗಡೆಯ ಹೊಂದುವುವು; ಏಕೆನೆ ಕವನದಿಂದೆ
ಕಲ್ಗಳೂ ವಾಲ್ಮೀಕಿಯಾಗಿಹವು ಹಿಂದೆ!

ದನಿಯು ನಿಂತಿತು. ನಾನು ಕಲ್ಲುತವಸಿಯ ಮುಟ್ಟಿ
ಮುದ್ದಿಟ್ಟು ಮರಳಿದೆನು. ಕಾಲಡಿಯೊಳಿಹ ಮಟ್ಟಿ
ನೋಯುವುದೊ ಎಂದಳುಕಿ ಮಲ್ಲಮೆಲ್ಲನೆ ನಡೆದೆ.
ನಾಳೆ ಸಂಜೆಯೊಳಾನು ಕಲ್ಲುಗೆಳೆಯನ ಬಿಡದೆ
ಕಂಡು ಮಾತಾಡುವೆನು; ಕವನಗಳ ಹಾಡುವೆನು:
ಕಲ್ಲು ಕವಿಯಪ್ಪನ್ನೆವರಮಾನು ಹಾಡುವೆನು!
ಶಿಲೆಯು ಕಲೆಯಪ್ಪನ್ನೆವರಮಾನು ಹಾಡುವೆನು!

೦೩-೦೩-೧೯೩೧

## ವಿಜ್ಞಾನಿ

ನುಡಿದು ನುಡಿದು ಮೂಕನಾದೆ;
ನೋಡಿ ನೋಡಿ ಕುರುಡನಾದೆ.
ನುಡಿಯುತಿರಲು ನುಡಿದುದೆಲ್ಲ
ನುಡಿಯ ಮೀರಿದೆ.
ನೋಡೆ ನೋಡೆ ಕಂಡುದೆಲ್ಲ
ಕರಗಿ ಹಾರಿದೆ!

ನಡೆಯಲಿಳಿಯೆ ಕರಗಿಹೋಯ್ತು,
ತಿಳಿಯಲರಿವೆ ಬಂಜೆಯಾಯ್ತು.
ಕಲ್ಲು ಮಣ್ಣು ಜಡವದೆಲ್ಲ
ಜೀವವಾಗಿದೆ.
ಮನದ ವರ ವಿಮರ್ಶೆಯೆಲ್ಲ
ಭಾವವಾಗಿದೆ.

ಬೆಟ್ಟಗಿಟ್ಟ ಬಂಡೆಗಿಂಡೆ
ಕುಟ್ಟಲೆಲ್ಲ ಹಿಟ್ಟನುಂಡೆ!
ಮುಟ್ಟಲೊಡನೆ ಗುಳ್ಳೆಯಂತೆ
ಪೊಳ್ಳು ಹೋಗಿದೆ!
ಗಟ್ಟಿ ನನ್ನಿ ಕನಸಿನಂತೆ
ತೆಳ್ಳಗಾಗಿದೆ!

ಕನಸುಗಳನು ಕಡಿಯಲೆಂದು
ಹಿಡಿದ ಕೊಡಲಿಯೆ ಕನಸಿಂದು;
ಶಕ್ತಿ ಜಲಧಿಯೊಳು ತರಂಗ –
ಭಂಗವಾಗಿದೆ!
ವಿದ್ಯುದಣುಗಳೆದ್ದು ಕುಣಿವ
ರಂಗವಾಗಿದೆ!

ಬೆಳಕು ಬರಲು ಕತ್ತಲಾಯ್ತು,
ತಿಳಿಯಲರಿವುಗೆಟ್ಟುಹೋಯ್ತು.
ಜಾನಗೇಡೆ ಜಾನಕೆಲ್ಲ
ಪರಮಸಿದ್ಧಿಯು!
ಬುದ್ಧಿಯಳಿವೆ ತಿಳಿದು ನೋಡೆ
ಬುದ್ಧ ಬುದ್ಧಿಯು!

ಸಾಯದೆಂದು ಕಲ್ಲನೊಡೆಯೆ,
ನೋಯದೆಂದು ಮರವ ಕಡೆಯೆ,
ಕಲ್ಲು "ನಿದ್ದೆಗೆಡೆಸಬೇಡ!"
ಎಂದು ರೇಗಿತು!
ಮರವು "ಕನಸನೊಡೆಯಬೇಡ!"
ಎಂದು ಕೂಗಿತು!

ವಿದ್ಯುದಣುಗಳೆದೆಯ ಮಧ್ಯೆ
ವಿಲಯ ಮಾಡುತಿಹುದು ನಿದ್ದೆ.
ಕಡಲ ಕುಡಿವಗಸ್ತ್ಯಶಕ್ತಿ

ಹನಿಯೊಳಡಗಿದೆ!
ಪೊಡವಿಯೊಡೆವ ಸಿಡಿಲ ಶಕ್ತಿ
ಹುಡಿಯ ಹೊಡೆಗಿದೆ!

ನನ್ನ ಈ ಪರೀಕ್ಷೆಮನೆಗೆ
ಗುಡಿಯ ಪಟ್ಟವಾಯ್ತು ಕೊನೆಗೆ:
ಮೂಲಬೀಜಸೂತ್ರವೆಲ್ಲ
ಮಂತ್ರವಾಗಿವೆ!
ಕಂಡು ಹಿಡಿದ ಯಂತ್ರವೆಲ್ಲ
ತಂತ್ರವಾಗಿವೆ!

ನನ್ನ ಕರಣ ಕುಸುಮವಾಯ್ತು;
ನನ್ನ ಕಾರ್ಯ ಪೂಜೆಯಾಯ್ತು!
ಬಿಟ್ಟ ಗುಡಿಗೆ ಕಟ್ಟಕಡೆಗೆ
ಮರಳಿ ಬಂದಿಹೆ!
ಅಂದು ತೊರೆದ ದೇವರೆದುರೆ
ಇಂದು ನಿಂದಿಹೆ!

೧೧-೦೯-೧೯೩೧

## ಕಡಲ ತಡಿ

ಕಡಲ ತಡಿಯ ಮಳಲ ಗುಡಿಯ
ಹೊಸಲೊಳಾನು ಮೂಡಿದೆ;
ಸುತ್ತಮುತ್ತ ಬಾನಿನತ್ತ
ಕಣ್ಣನಟ್ಟಿ ನೋಡಿದೆ.
ಗುರುವಿನೆಡೆಯ ಶಿಷ್ಯನಂತೆ,
ಹರಿಯ ಬಳಿಯ ಭಕ್ತನಂತೆ,
ಸೊಬಗನೊಲಿದ ನಾನು ನಿಂತೆ
ಕಡಲ ತಡಿಯ ಗುಡಿಯಲಿ:

ತೀರವೀವಪಾರಭಾವ
ಹೊಮ್ಮಲಹುದೆ ನುಡಿಯಲಿ?

ಕಡಲು ಮುಂದೆ, ಪೊಡವಿ ಹಿಂದೆ,
ಮೇಲೆ ಬಾನು ಮೆರೆದುದು;
ರನ್ನದೊಡಲ ಹಿರಿಯ ಕಡಲ
ಚಿರನಿನಾದ ಮೊರೆದುದು.
ಕಡಲು, ಪೊಡವಿ, ಹಿರಿಯ ಬಾನು
ಗಳಿಗೆ ನಾನು ಕಿರಿಯನೇನು?
ಸೊಗವ ಸವಿವ ಕವಿಯು ನಾನು
ನಿಂತು ನೋಡೆ ಸುತ್ತಲು
ಆ ದಿಗಂತದೊಳು ಅನಂತ
ಮಹಿಮೆ ತೋರ್ದುದೆತ್ತಲು!

೦೨-೧೧-೧೯೨೯

## ಚಿರಕಲೆ

ಎಲ್ಲ ನಶಿಸುವುದು; ವರಕಲೆಯೊಂದೇ
ಚಿರತೆಯ ಸವಿಯುವುದು;
ಸಾಮ್ರಾಜ್ಯಕೆ ಜಡ ಶಾಸನವೊಂದೇ
ಸ್ಮಾರಕವಾಗುವುದು.

ರೈತನ ನೇಗಿಲ ಕುಳ ಮೇಲೆತ್ತುವ
ಬಿಳಿ ತಲೆಯೋಡೊಂದೇ
ಸಾರ್ವಭೌಮನಾ ಸರ್ವೈಶ್ವರ್ಯಕೆ
ಸಾಕ್ಷಿಯಾಗುವುದು.

ಅಮರರು ಕೂಡ ಸಾಯಲೆಬೇಕು;
ಕವಿತಾ ಕಲೆಯೊಂದೇ

ಬಾಳುವುದು;
ಸಾವನೆ ಹೂಳುವುದು.*

೦೪-೦೩-೧೯೩೧

---

* Gautier ಕವಿಯ ಕವನವೊಂದರ ಭಾಷಾಂತರ.

## ಬಾ ಬಾ ದೊರೆ

ಬಾ ಬಾ ದೊರೆ, ಬಾಗಿಲ ತೆರೆ;
ಸುಮ್ಮನಿರುವರೆ?
ಎದೆಯ ಮೊರೆ ಕರೆಯುತಿರೆ
ಮರೆವರೇ ತೊರೆವರೇ?

ತಿರುಕಿ ನಾನು ಒಲ್ಮೆಯಲಿ
ನಿನ್ನ ಗುಡಿಯ ಬಾಗಿಲ ಬಳಿ
ಬಂದು ಕರೆಯೆ ರಾಗದಲಿ; ಬಾ ಬಾ....

ವಜ್ರ ವೈಡೂರ್ಯದಲಿ
ಮೆರೆವ ಬೈಗುಗೆಂಪಿನಲಿ
ತೇಲಿಯೆಲರ ತಂಪಿನಲಿ; ಬಾ ಬಾ....

ಹರಿವ ಹೊನಲ ತಿಂಗಳಲಿ
ಮಲಗೆ ತಿರೆಯು ಮೌನದಲಿ
ಸವಿಯ ಸೊಗದ ಕನಸಿನಲಿ; ಬಾ ಬಾ....

ಮೂಡುದೆಸೆಯ ಮುಗುಳುನಗೆ
ಬಿರಿಯೆ ಮೆಲ್ಲಮೆಲ್ಲಗೆ,
ಅರುಣ ಕಿರಣ ಸರಣಿಯಲಿ; ಬಾ ಬಾ....

ಮೊರೆವ ಸಲಿಲ ರಂಗದಲಿ
ಜಲತರಂಗ ಭಂಗದಲಿ
ಮೋಹವೆರಚುತಂಗದಲಿ; ಬಾ ಬಾ….

ಜನನ ಜೀವ ಮರಣದಲಿ,
ಎನ್ನ ಅಂತಃಕರಣದಲಿ
ನೀನೆ ನೆಲಸಿ ಕರುಣದಲಿ; ಬಾ, ಬಾ….

೦೪-೧೦-೧೯೭೯

## ಮೌನಿ

ಹುಟ್ಟಿದೆನೇತಕೊ ನಾನರಿಯೆ;
ಬಾಳುವೆನೇತಕೊ ನಾನರಿಯೆ;
ಸಾಯುವೆನೇತಕೊ ನಾನರಿಯೆ;
ಏನನು ನಾನರಿಯೆ!

ಹುಟ್ಟಿದೆನೆಂಬುದ ನಾ ಬಲ್ಲೆ;
ಬಾಳುವೆನೆಂಬುದ ನಾ ಬಲ್ಲೆ;
ಸಾಯುವೆನದನೂ ನಾ ಬಲ್ಲೆ;
ಇನಿತನು ನಾ ಬಲ್ಲೆ!

ಪ್ರಶ್ನೆಯ ಕೇಳಲು ನಾನೊಲ್ಲೆ;
ಉತ್ತರ ಹೇಳಲು ನಾನೊಲ್ಲೆ;
ಪ್ರಶ್ನೆಗುತ್ತರವ ನಾ ಬಲ್ಲೆ;
ಹೇಳಲರಿಯೆನೊಲ್ಲೆ!

ಅಂತವನಂತವ ಸೇರ್ವಲ್ಲಿ,
ದಾರಿಗಳೆಲ್ಲವು ಸೇರ್ವಲ್ಲಿ,
ದಾರಿಗರೆಲ್ಲರು ಸೇರ್ವಲ್ಲಿ
ನಿಂತಿಹೆ ನಾನಲ್ಲಿ!

ನಾ ನಿಂತಿಹೆನಾನಂದದಲಿ;
ನಾ ನಿಂತಿರುವೆನು ಶಾಂತಿಯಲಿ;
ನಿಂತಿಹೆ ನಚ್ಚಿನ ನೆಚ್ಚಿನಲ್ಲಿ,
ಮೌನದ ಕೆಚ್ಚಿನಲಿ!

ಬಾ, ಬೇಕಾದರೆ ಬಾ ನೋಡು!
ಬಾ, ನೀನೂ ನನ್ನನು ಕೂಡು!
ಬಾ, ವಾದವನಾಚೆಗೆ ದೂಡು!
ಅದು ಮೌನದ ಬೀಡು!

೩೦-೦೫-೧೯೨೯

## ಆಹ್ವಾನ ವಾಣಿ

ಕರೆಯುತಿದೆ ಓ ದೂರದಾಹ್ವಾನವಾಣಿ!
ಅಸೀಮ ಆಕಾಶದ ಸುನೀಲವಾಣಿ!

ಹೃದಯ ವೀಣೆಯ ಮೃದುಲ ತಂತಿಯನು ಮಿಡಿಯುತಿದೆ;
ಯುಗಯುಗಾಂತರದ ಮೌನವನು ಕಡೆಯುತಿದೆ.
ಮನದ ಏಕಾಂತದಲಿ ಮಲಗಿರುವ ಹೊಂಗನಸು
ಮೊದಲು ತೊದಲುವ ಹಸುಳೆಯಂತೆ ನುಡಿಯುತಿದೆ!

ಮಧುರ ಸುಖವೊಂದು ಹಾ ಮಧುರತರ ದುಃಖದಲಿ
ವಿರಹವನು ಕೆರಳಿಸುತೆ ಸಂಯೋಗಕೆಳಸುತಿದೆ!
ಮಾತುಗಳನಾಪೋಶಿಸುವ ಭವ್ಯಮೌನದಲಿ
ಸಿದ್ಧಾಂತ ಸಂದೇಹಗಳು ಮೂಕವಾಗುತಿವೆ!

ನಭದ ಸಿಡಿಲೆರಗಿ ಮೈಮರೆವಂತೆ ತಿರೆಯ ಪಶು
ಮೌನ ಪೀಡಿತ ಚಿಂತೆ ಮೂರ್ಛೆ ಹೋಗುತಿದೆ.
ಹೇ ಮೌನ, ಹೇ ಶಾಂತಿ, ಹೇ ಶೂನ್ಯ ನೀಲಿಮೆಯೆ,
ಕನಸೊಡೆದು ನನಸು ಬರಿ ನೀಲವಾಗುತಿದೆ!

ಕರೆಯುತಿದೆ ಓ ದೂರದಾಹ್ವಾನ ವಾಣಿ!
ಅಸೀಮ ಆಕಾಶದ ಸುನೀಲ ವಾಣಿ!

೧೦-೧೧-೧೯೩೧

## ಕವಿತೆಯಲ್ಲಿ

ನೀ ಹೇಳೆ ನಾ ಬರೆದೆ,
ನೀ ಹಾಡೆ ನಾನೊರೆದೆ!
ನನ್ನ ತಪ್ಪೇನು?
ನೀ ಕುಣಿಸೆ ನಾ ಕುಣಿದೆ,
ನೀ ನಲಿಸೆ ನಾನಲಿದೆ,
ನನ್ನ ತಪ್ಪೇನು?

ನೀ ಮೊಗವನೊಡ್ಡಿ ಬರೆ
ನಾ ಮುತ್ತನೊತ್ತಿದರೆ
ನನ್ನ ತಪ್ಪೇನು?
ನೀನೆದೆಯ ನೀಡಿಬರೆ
ನಾನೆದೆಯ ನೀಡಿದರೆ
ನನ್ನ ತಪ್ಪೇನು?

೨೧-೦೫-೧೯೩೧

## ಹುಚ್ಚಿಗಿದು ಬೇರೊಂದು ಹೆಸರಲ್ಲವೆ?

ಕೊಂದರೂ ಕೊಂದಿಲ್ಲ,
ತಿಂದರೂ ತಿಂದಿಲ್ಲ.
ಮಾಡಿದರು ಮಾಡಿಲ್ಲ,
ನೋಡಿದರು ನೋಡಿಲ್ಲ.
ಸತ್ತರು ಸತ್ತಿಲ್ಲ;
ಬದುಕಿದರು ಬದುಕಿಲ್ಲ.

ಎದ್ದರೂ ಎದ್ದಿಲ್ಲ,
ಬಿದ್ದರೂ ಬಿದ್ದಿಲ್ಲ.
ಕಪ್ಪಗಿದ್ದರು ಬೆಳ್ಪು,
ಬೆಳ್ಳಗಿದ್ದರು ಕಪ್ಪು.
ಹೌದಾದರೂ ಅಲ್ಲ,
ಅಲ್ಲವಾದರು ಹೌದು!
ವೇದಾಂತವಂತೆಯಿದು
ತರ್ಕವಂತೆ!
ಹುಚ್ಚಿಗಿದು ಬೇರೊಂದು
ಹೆಸರಲ್ಲವೇ?

೧೨-೦೪-೧೯೩೦

## ನೂರಾರು ಹೀನದಲಿ

ನೂರಾರು ಹೀನದಲಿ ನೀನೆನ್ನ ನೂಕುತಿಹೆ;
ಮುಳುಗುತಿರೆ ಮತ್ತೆ ನೀನೆತ್ತುತಿರುವೆ.
ನೂರಾರು ದೈನ್ಯದಲಿ ನೀನೆನ್ನನೆಸೆಯುತಿಹೆ;
ಕನಿಕರಿಸಿ ಮರಳಿ ಮೇಲೆತ್ತುತಿರುವೆ.

ಒಮ್ಮೆ ಅವುಗಳನರಿವೆ; ಒಮ್ಮೆ ನಾನರಿಯದೆಯೆ
ಮೊರೆಯಿಡುವೆ ಸಲಹೆಂದು, ಪರಮಗುರುವೆ.
ಸಂಸಾರಸಾಗರದೊಳೆನಗೀಜು ಕಲಿಸಲೆಂ
ಇಂತೆನ್ನನಾಡಿಪೆಯ, ನನ್ನ ದೊರೆಯೆ?

ರೆಕ್ಕೆ ಬಲಿತಿಹ ಮರಿಯ ತಾಯ್ವಕ್ಕಿ ಹಕ್ಕೆಯಿಂ
ಕೆಳಗೆಸೆದು ಹಾರುವುದು ಕಲಿಸುವಂತೆ.
ಕೆಳಗೆಸದು ಮೇಲೆತ್ತಿ ಕೆಚ್ಚೆದೆಯ ಕಲಿಸುತಿಹೆ;
ಬಲಿತ ರೆಕ್ಕೆಗೆ ಬಲವ ಕಲಿಸುತಿರುವೆ!

೦೬-೦೫-೧೯೩೦

# ಮೇಘ

ಪರಮ ಪುರುಷನದಾವ ಮಹಿಮೆಯ
ಸಾರುತಲೆಯುವೆ, ಮೇಘವೆ?
ಆವ ಪರಮಾನಂದ ನಿಧಿಯಿಂ
ದೇಳುತೆಲ್ಲಿಗೆ ಪೋಗುವೆ?
ಭಾವ ತೋಟದ ಭಕುತಿ ಬೀಜಕೆ
ಹರುಷ ವರುಷವ ಸುರಿಸುತ
ದೇವದೇವನ ದಿವ್ಯಕಾಂತಿಯ
ಹೃದಯದೆಡೆಯೊಳು ಸೂಸುವೆ.

ಗಿರಿಶಿಖರಗಳ ಮೇಲೆ ತೇಲುತ,
ಸಂದಿಸುತ ವರಪುರಗಳ,
ಬಳಲಿ ಬಾಯಾರಿರುವ ಸುಮಗಳಿ
ಗೀಯುತತುಳಾನಂದವ;
ಪಸಲೆ ವನಗಳಿಗೊಲಿದು ನೂತನ
ಜೀವಕಳೆಯನು ತುಂಬುತ,
ವರ ಸರೋವರಗಳಿಗೆ ಧೈರ್ಯವ
ನೀಯುತಲೆಯುವೆ, ಜಲಧರ.

ರವಿಯೆ ಜನಕನು, ಜನನಿ ಶರಧಿಯು,
ಗಗನ ನಿನ್ನಯ ದಾದಿಯು;
ಧರಣಿಯೇ ಸಖಿ, ಕಾನನಂಗಳು
ಹರುಷವೀಯುವ ಗೆಳೆಯರು;
ಮೊಳಗೆ ಕಿಂಕರ, ಚಪಲೆ ಸೇವಕಿ,
ಬರಿಸವೇ ತನುಜಾತನು!
ಇಂದ್ರಚಾಪವೆ ತಂದೆಯೀಯುವ
ಸಪ್ತರಾಗದ ಹಾರವು.

ಉದಯಕಾಲದೊಳರುಣ ಕಾಂತಿಯ
ಬೆಡಗ ಪಡೆಯುತ ಶೋಭಿಪೆ;

ಬೈಗು ಗಗನದಿ ಶೋಣಿತಾಂಬರ
ಧಾರಿಯಾಗುತ ರಂಜಿಪೆ.
ನಲಿವ ಯೌಮುದಿ ನಿನ್ನ ಶೋಭಿಸೆ
ಕವಿಗೆ ಸಂತಸವೀಯುತ
ಪರಮಪುರುಷನ ದಿವ್ಯ ಸೊಬಗಾ-
ನಂದವೆಂಬುದ ತೋರುವೆ.

ಎಳೆಯ ಬಾಲರಿಗೊಲಿದು ಚಿತ್ರಿಪೆ
ನಭದಿ ಅಮರಾವತಿಯನು;
ಬಾಲರೂಹನೆಗಳನು ವಂಚಿಸ
ದಂತೆ ಪಟಗಳ ರಚಿಸುವೆ.
ಒಮ್ಮೆ ಗಜವಾಗೊಮ್ಮೆ ಹರಿಯಾ
ಗೊಮ್ಮೆ ರಕ್ಕಸನಾಗುವೆ;
ಒಮ್ಮೆ ವನವಾಗೊಮ್ಮೆ ಗಿರಿಯಾ
ಗೊಮ್ಮೆ ವಾಹಿನಿಯಾಗುವೆ!

ಬೊಮ್ಮನಿಂದೈತಂದು ಬೊಮ್ಮನೊ
ಳೈಕ್ಯಮಾಗಲು ತೆರಳುವ
ಜೀವನಂದದಿ ಕಡಲಿನಿಂದೈ
ತಂದು ಕಡಲನು ಸೇರುವೆ;
ಒಂಟಿಯಲೆಯುವ ಕವಿಯ ಚೈತ್ಯದ
ತೆರದಿ ಅಮ್ರುತವನೀಂಟುತ
ಧರಣಿಗಿಳಿಯುತ ಕಡಲ ಪಡೆಯುವೆ
ದೇಶ ದೇಶವ ದಾಂಟುತ.

ಪವನ ಮಾರ್ಗದ ಪುಣ್ಯ ಯಾತ್ರಿಕ
ನಿನ್ನ ಕಾಶಿ ಅದಾವುದು?
ಆವ ಪರ್ವತಕೂಟವಭ್ಯಾ-
ಗತನು, ಜಲಧರ, ಪೇಳೆಲೈ?
ಚೈತ್ರಪಲ್ಲವ ಶೋಭಿತಾಶ್ರಮ
ವಾವುದೈ, ಸಂಚಾರಿಯೆ?

ನಿರ್ಮಲಾತ್ಮದ ದಿವ್ಯಯಾತ್ರಿಕ,
ಪುಣ್ಯ ಜಲಧರ, ಮಂಗಳಂ

೧೯೨೬

## ಕಲಾಸುಂದರಿ

ಮೇಲೆ ಗಗನ ನೀಲತಲ,
ಕೆಳಗೆ ತಿರೆಯ ಹಸುರು ನೆಲ,
ಸುಂದರ ಸುರತರುಣಿಯೆ,
ನಡುವೆ ನೀನು ಮಲೆಯಲಿ
ತುಂಗ ಶಿಖರ ಶಿಲೆಯಲಿ,
ಹೇ ಅರಣ್ಯ ರಮಣಿಯೆ!
ಮಂದ ಪವನ ಬರಲು ಬೀಸಿ
ಅಂಧ ತಿಮಿರ ಕೇಶರಾಶಿ
ನಲಿನಲಿವುದು ಮನಮೋಹಿಸಿ,
ಹೇ ಮತ್ತಕಾಶಿನಿ!
ಸುನೀಲ ನಯನಾಳದಲ್ಲಿ
ರಹಸ್ಯ ವಿಶ್ವ ಸ್ವಪ್ನವಲ್ಲಿ
ನಳನಳಿಸಿದೆ ಚೆಲುವ ಚೆಲ್ಲಿ,
ಓ ಚಿರವನವಾಸಿನಿ!

ನಿನ್ನ ಮುಡಿಯ ಮೇಲುಗಡೆ
ಇನಶಶಿಗಳ ನಿಚ್ಚನಡೆ,
ಓ ಸುಮನಸ ಸಂಗಿನಿ!
ಕಡಲಲೆಗಳ ಗಡಿಬಿಡಿ
ನೀನಿಡುತಿಹ ಮೆಲ್ಲಡಿ,
ದುಃಖ ಸುಖ ತರಂಗಿನಿ!
ಮೊದಲ ಬಯಕೆ ಸಿಡಿದ ಕಿಡಿ,
ಮೊದಲ ಗಾನವೊಗೆದ ನುಡಿ,
ನೀನೆ ಕಡಲು, ನೀನೆ ತಡಿ,

ಹೇ ವಿಶ್ವದೇಹಿನಿ!
ನರ್ತಿಪ ತವ ಚರಣನ್ಯಾಸ
ಜನನ ಮರಣ ಕಾಲಾದೇಶ!
ನೃತ್ಯದೊಳವು ಲಯವಿಶೇಷ,
ಹೇ ತ್ರಿಭುವನ ಮೋಹಿನಿ!

ಸೂರ್ಯ ಚಂದ್ರರುದಯದಲಿ
ಪೂರ್ವದಿಶಾ ಹೃದಯದಲಿ,
ಸ್ವರ್ಣಸ್ವಪ್ನ ರಂಗಿನಿ,
ವರ್ಣ ಜಲಧಿ ಮಥನದಿ
ಬಣ್ಣ ಬಳಿವೆ ಜತನದಿ,
ಓ ಭಾವನಾಂಗಿನಿ!
ಲಲಿತ ಚರಣ ಭಂಗಿಯಿಂದೆ
ನಡೆಯೆ ನೀನು ಮುಂದೆ ಮುಂದೆ
ಬಹುವು ಋತುಗಳೆಲ್ಲ ಹಿಂದೆ,
ಸ್ಥಿರ-ಅಸ್ಥಿರ-ಗಾಮಿನಿ!
ಸ್ವರ್ಗದುದಯ ಗಿರಿಯ ಮೇಲೆ
ಕನಕ ತಪನ ಕಿರಣಮಾಲೆ
ನಿನ್ನ ಕುಶಲ ಕಲೆಯ ಲೀಲೆ,
ಹೇ ಕಾವ್ಯ ಕಾಮಿನಿ!

ನಭದಲಿ ನೀ ನೀಲಿಮಾ,
ನಿಶೆಯಲಿ ನೀ ಕಾಲಿಮಾ,
ಹೇ ಅಂತರ್ಯಾಮಿನಿ!
ದಿವಾ ನೀನೆವೆ ಬಿಚ್ಚಲು,
ನಿಶಾ ನೀನೆವೆ ಮುಚ್ಚಲು,
ಚಿರ ಚಂಚಲ ಭಾಮಿನಿ!
ರವಿಯ ಮುಂದೆ ನೀ ಬರೆ ಉಷೆ,
ಸಂಜೆಯ ಹಿಂದೈತರೆ ನಿಶೆ,
ಹೇ ಅಮರ ಮಧುರ ಅನಿಮಿಷೆ,
ಅಮಿತ ವೇಷಧಾರಿಣಿ!

ಕಲೆಗೆ ತವರು, ಸಿರಿಗೆ ಬಿತ್ತು,
ಸೊಬಗಿಗೆ ನೆಲೆ ನಿನ್ನ ಮುತ್ತು,
ಸೊನ್ನಿಯಿಂದೆ ಜಗವ ತಂದೆ,
ಓ ಋತ ಅಧಿಕಾರಣಿ!

ಚರ ಅಚರಗಲಂತರದಿ
ಉರಿಯುತಿಹೆ ನಿರಂತರದಿ,
ಹೇ ಪ್ರೇಮೋನ್ಮಾದಿನಿ!
ನಿನ್ನ ಮೋಹ ಶಕ್ತಿಯಿಂ
ಬದುಕಿದೆ ಸೆರೆ ಮುಕ್ತಿಯಿಂ,
ಓ ಬಂಧನ ಮೋದಿನಿ!
ಶತ ಸಹಸ್ರ ನಿಯತಿ ಲೋಲೆ
ನೀನಕೂಲ ಮುಕ್ತಿಶೀಲೆ;
ನಿಯಮಗಳೆ ನಿನಗೆ ಬಳೆ,
ಅನವರತ ಅಶೃಂಖಲೆ!
ನೀನು ಕಾಣುತಿರುವ ಕನಸು
ಹೊರಗೆ ಹೊಳೆಯುತಿರುವ ನನಸು.
ವಿಧಿಗೆ ನಿಧಿಯ ನಿನ್ನ ಮನಸು,
ಹೇ ಕಠೋರ ಕೋಮಲೆ!

ಜಗದನಂತ ಯಾತ್ರೆಯಲಿ
ಅಕ್ಷಯ ರಸ ಪಾತ್ರೆಯಲಿ,
ಓ ಮೃತ್ಯು ಮಾಧುರಿ,
ತುಂಬಿ ಹರ್ಷ ಶೋಕಮಂ
ಸೃಜಿಪೆ ನರಕ ನಾಕಮಂ,
ಹೇ ಅರೂಪ ಸುಂದರಿ!
ವ್ಯಕ್ತ ಜಗದಿನತ್ತ ಕಡೆ
ಮಹಾ ಅತೀತದಂಚಿನೆಡೆ
ಅದು ಇದನಾಲಿಂಗಿಪೆಡೆ,
ನೀಲಿಮಾ ದಿಗಂಬರೆ,
ತಾರೆಗಳನು ಕಡೆದು ಮಾಡಿ

ತಪನ ಶಶಿಗಳೊಡನೆ ಕೂಡಿ
ನಲಿವೆ ನಭವ ಮಾಲೆ ಸೂಡಿ,
ಹೇ ಸಾಗರಾಂಬರೆ!

ಮೊದಲು ಸುಳಿವೆ ಕನಸಿನೊಲು,
ನಡುವೆ ಮೆರೆವೆ ನನಸಿನೊಲು,
ರಸಿಕ ಮನೋರಾಗಿನಿ!
ನಿಲುವೆ ಕಡೆಗೆ ನೆನಸಿನೊಲು
ವಿಶ್ವ ಮಹಾ ಮನಸಿನೊಳು,
ಶಾಶ್ವತ ರಸಯೋಗಿನಿ!
ರಕ್ತಿಮ ತಟಿಲ್ಲತೆಯ ತೋರಿ,
ಗರ್ಜಿಪ ಸಿಡಿಲ್ದನಿಯ ಬೀರಿ
ಬರುವೆ ಮಾರಿ ಮಳೆಯ ಕಾರಿ,
ವರ್ಷಮೇಘ ಕೇಶಿನಿ!
ಕೆಂಡದುರಿಯ ಬೇಸಗೆಯಲಿ
ತಪ್ತಶಿಲೆಯ ಹಾಸಗೆಯಲಿ
ತಪವ ನೋನುತಿರುವೆ ನೀನು,
ಭೀಷಣ ಸಂನ್ಯಾಸಿನಿ!

ಚೆಲುವೆ ನಿನ್ನ ಸನ್ನಿಧಿ
ಚೈತನ್ಯದ ಚಿರನಿಧಿ,
ನೂತನ ಪ್ರಚಾರಿಣಿ!
ಶಿಥಿಲ ಜಡ ಸನಾತನಂ
ನಿನ್ನಿಂದಹುದು ನೂತನಂ,
ಹೇ ಜಗಚ್ಚಕ್ರಧಾರಿಣಿ!
ಗಿರಿಯ ಶಿರದರಣ್ಯತಲದಿ
ಹೊಮ್ಮಿ ಹರಿವ ತೊರೆಯ ಕೆಲದಿ
ಹಸುರು ಹುಚ್ಚು ಹಿಡಿದ ನೆಲದಿ,
ಓ ಸಸ್ಯ ಶ್ಯಾಮಲೆ,
ನಿಬಿಡ ಕುಸುಮಖಚಿತ ವಲ್ಲಿ
ರಚಿತ ಕುಂಜ ಛಾಯೆಯಲ್ಲಿ

ನಾಟ್ಯವಾಡಿ ನಲಿವೆ ಹಾಡಿ,
ಹೇ ಕಾನನ ಕೋಮಲೆ!

ಪ್ರಣಯದರುಣರಂಗದಲಿ
ಶೋಣಿಮಾ ತರಂಗದಲಿ,
ಓ ವಿಶ್ವ ಸಂಸಾರಿಣಿ,
ಲಲಿತ ಚರಣ ಭಂಗದಿಂ
ಕುಣಿವೆ ವೀತಸಂಗದಿಂ,
ಹೇ ಬ್ರಹ್ಮಚಾರಿಣಿ!
ನೂರುಕೋಟಿ ತುಟಿಗಳಿಂಪು
ಕಡುಗಿ ನಿನ್ನ ಕೆನ್ನೆಗೆಂಪು;
ನೀನೆ ಜೌವನದ ಅಲಂಪು,
ಓ ಚೆಲುವಿನ ಚಿಲುಮೆಯೆ!
ಹೂವುಗಳಿಗೆ ಬಣ್ಣ ಬಳಿದು
ದುಂಬಿಗಳನು ಬಳಿಗೆ ಸೆಳೆದು,
ಅವರನೊಲಿಪೆ, ಒಲುಮೆಗಲಿಪೆ,
ಓ ನಣ್ಪಿನ ನಲುಮೆಯೆ!

ನೀನೆ ಸುಖಂ ಧರ್ಮಕೆ, ನೀನೆ ಬಲಂ ಕರ್ಮಕೆ,
ಅಸಂಖ್ಯ ಭಾವಶಾಲಿನಿ!
ನಿಯಮ ನೀನೆ ಬುದ್ಧಿಗುಂ ಸಮಯರಹಿತ ಸಿದ್ಧಿಗುಂ,
ಓ ದ್ವಂದ್ವ ಮಾಲಿನಿ!
ತತ್ತ್ವಗಳಲಿ ನೇತಿ ನೇತಿ,
ಕಾವ್ಯಗಳಲಿ ಮಧುರ ಪ್ರೀತಿ,
ಬುಧರ ಮನದಿ ನೀನೆ ನೀತಿ,
ವಿಶ್ವ ಹೇ ವಿಧಾಯಕಿ!
ಕಡಲ ತೆರೆಯ ತರಲ ತಾನ,
ವನ ವಿಹಂಗ ಲಲಿತ ಗಾನ,
ನೀನೆ ಕವನ ಘನವಿಮಾನ,
ಸರ್ವ ರಸಪ್ರದಾಯಕಿ!

ನನ್ನನಂದು ಮಲೆಯಲಿ
ನಿನ್ನ ಕಲೆಯ ಬಲೆಯಲಿ,
ಓ ಇಂದ್ರಜಾಲಕಾರಿಣಿ,
ಮೋಹದಿಂದೆ ಮುತ್ತಿದೆ;
ಮುತ್ತುಗಳಲಿ ಸುತ್ತಿದೆ;
ಹೇ ಇಂದ್ರ ಧನುರ್ಧಾರಿಣಿ!
ಅಂದಿನಿಂದ ಇಂದುವರೆಗೆ
ಸಿಲುಕಿ ನಿನ್ನ ಹೊನ್ನ ಸೆರೆಗೆ
ಚೆನ್ನನಾದೆ ನಾನು ತಿರೆಗೆ,
ಆದಿಮ ರಸಮೂರ್ತಿಯೆ!
ಹಣತೆ ಸೊಡರು ಹಿಡಿದು ಮುಂದೆ
ನಡೆಯೆ ನೀನು ಬಹೆನು ಹಿಂದೆ.
ಕವಿಯ ಕಣ್ಗೆ ಬೆಳಕು ತಂದೆ,
ಹೇ ಅಸೀಮ ಸ್ಫೂರ್ತಿಯೆ!

ನಿನ್ನ ತೊಳು ಮರೆಯಲಿ
ನನ್ನ ಬಾಳು ಹೊರೆಯಲಿ,
ಓ ಜೀವನ ಪ್ರೇಯಸಿ!
ನಿನ್ನ ಎದೆಯ ಸೆರೆಯಲಿ
ನನಗೆ ಮುಕುತಿ ದೊರೆಯಲಿ,
ನಿತ್ಯ ಹೇ ನಃಶ್ರೇಯಸಿ!
ನಿಖಿಲ ಹೃದಯಪದ್ಮ ಪಾಣಿ,
ಮರಣ ಹರಣ ಅಮೃತವಾಣಿ,
ವಿಶ್ವದೇಕಮಾತ್ರ ರಾಣಿ,
ಹೇ ಮಾನಸ ಮಂದಿರೆ!
ಪ್ರಥಮ ಪೃಥಲ ತಿಮಿರ ಜಾತೆ,
ನಿತ್ಯ ನೂತನ ಪ್ರಸೂತೆ,
ನಮೋ ನಮೋ ಸೃಷ್ಟಿ ಮಾತೆ,
ಹೇ ಚಿರಂತನೇದಿರೆ!

೨೯-೦೯-೧೯೩೧

## ಬನದಲಿ ದಿನ ದಿನ

ಬನದಲಿ ದಿನ ದಿನ ಬಣ್ಣದ ಹೂಗಳು
ನಿನ್ನಯ ಚೆಲುವನು ಸಾರುತಿವೆ;
ಕೋಗಿಲೆ ಗಿಳಿಗಳು ನಿನ್ನಿನಿಗೊರಲಿನ
ಇಂಪಿನ ದನಿಯನು ಬೀರುತಿವೆ;
ತೀಡುವ ಕಂಪಿನ ತಣ್ಣನೆ ಗಾಳಿಯು
ನಿನ್ನುಸಿರೊಲ್ಮೆಯ ತೋರುತಿದೆ.
ನಳನಳಿಸೆಸೆಯುವ ಮಿಳಿರ್ವಿಳೆದಳಿರು
ನಿನ್ನೊಡಲಂದವ ಮೆರೆಯುವುದೆ?
ಗಾಳಿಗೆ ಬಳಕುವ ತೆಳ್ಳನೆ ಬಳ್ಳಿಯು
ನಿನ್ನಸಿಯೊಡಲನು ಜರೆಯುವುದೆ?
ಬನದಲಿ ತುಳುಕುವ ತಿಳಿಗೊಳವಾದರೊ
ಕಣ್ಣನು ಸರಸಕೆ ಕರೆಯುವುದೆ?
ಬನದೊಳು ನೀನೋ? ನಿನ್ನೊಳು ನಾನೋ?
ನಾನೂ ನೀನೂ ಬನದೊಳಗೊ?
ಬನವೂ ನೀನೂ ಕನವರಿಪಾನೂ
ಎಲ್ಲವು ಎನ್ನಯ ಮನದೊಳಗೊ?

೦೭-೧೧-೧೯೨೯

## ನನ್ನನು ನಿನ್ನಯ ಕೊಳಲನು ಮಾಡು

ನನ್ನನು ನಿನ್ನಯ ಕೊಳಲನು ಮಾಡು,
ಹೇ ಜೀವೇಶನೆ ಬೇಡುವೆನು;
ನಿನ್ನಯ ಸವಿಗೊರಲುಸಿರನು ನೀಡು,
ವಿಧ ವಿಧ ರಾಗವ ಹಾಡುವೆನು.

ನನ್ನೀ ಹೃದಯದ ಶೂನ್ಯವ ತುಂಬಲಿ
ನಿನ್ನುಸಿರೊಲ್ಮೆಯು ಪೂರ್ಣತೆಯಿಂ;

ಬನದುಸಿರೆದೆಯಲಿ ತೊದಲುವ ಬದಲು
ನಿನ್ನುಸಿರಾಡಲಿ ಪರಿಣತೆಯಿಂ!

೧೮-೧೧-೧೯೨೯

## ನಾನು ಯಾರು?

ವಾಮನ ಸ್ವರೂಪದಲಿ ಬಂದೆ ನನ್ನೆದೆಗಂದು,
ನನ್ನ ಬಾಳಿನಲಿ ಮೂರಡಿಯ ಬೇಡಿ;
ಭೀಮನಂದದಿ ಬಳೆದು ನಿಂತಿರುವೆ ನೀನಿಂದು
ನನ್ನ ಸರ್ವಸ್ವವನು ಸೂರೆಮಾಡಿ.

ಸೌಂದರ್ಯದಂದದಲಿ ಮೊದಲು ಮೈದೋರಿದೈ;
ಮೋಹದಲಿ ಬಳಿಗೆ ಬರೆ ಸತ್ಯವನು ಬೀರಿದೈ;
ಸಾಮರವದಿಂಪಿನಲಿ ಧರ್ಮವನು ಸಾರಿದೈ:
ಬರುವ ಬಳೆಯುವ ಬಗೆಯ ಬಲ್ಲವರಾರು?
ಬದ್ದಿನವನಂದದಲಿ ಮೊದಲು ಬಹೆ ಚಂದದಲಿ;
ಕಡೆಗೆ ನಿನ್ನದೆ ಎಲ್ಲ! ನಾನು ಯಾರು?

೦೨-೧೧-೧೯೨೯

## ಧ್ರುವತಾರೆ

ಅಗಣಿತ ತಾರಾಗಣಗಳ ನಡುವೆ
ನಿನ್ನನೆ ನೆಚ್ಚಿಹೆ ನಾನು;
ನನ್ನೀ ಜೀವನ ಸಮುದ್ರಯಾನಕೆ
ಚಿರ ಧ್ರುವತಾರೆಯು ನೀನು.

ಇಲ್ಲದ ಸಲ್ಲದ ತೀರಗಳೆಡೆ ನಾ
ತೊಳಲುತ ಬಳಲಿದರೇನು?

ದಿಟ್ಟಿಯು ನಿನ್ನೊಳೆ ನೆಟ್ಟಿರೆ, ಕಡೆಗೆ
ಗುರಿಯನು ಸೇರೆನೆ ನಾನು?

ಚಂಚಲವಾಗಿಹ ತಾರಕೆಗಳಲಿ
ನಿಶ್ಚಲನೆಂದರೆ ನೀನೆ!
ಮಿಂಚಿ ಮುಳುಗುತಿಹ ನಶ್ವರದೆದೆಯಲಿ
ಶಾಶ್ವತನೆಂದರೆ ನೀನೆ!

೦೭-೧೧-೧೯೨೯

## ಶಂಕರಾಚಾರ್ಯ (ಸ್ವಪ್ನ ದರ್ಶನ)

ಅರಿಯದೂರ ಗಿರಿಗಳಲ್ಲಿ
ತಿರುಗಿಯಲೆದು ಬರುತಲಿದ್ದೆ;
ಇದ್ದಕಿದ್ದಹಾಗೆಯೊಂದು
ನೋಟವೆನ್ನ ಕಣ್ಗೆಬಿತ್ತು;
ಬೆಚ್ಚಿಬಿದ್ದು ನಿಂತೆನು!
ಸೂರ್ಯಚಂದ್ರರಿಬ್ಬರಲ್ಲಿ
ಉದಯವಾಗುತಿದ್ದರು!
ಹಗಲು ರಾತ್ರಿಯೆರಡು ಅಲ್ಲಿ
ಕಲೆತು ರಮಿಸುತಿದ್ದುವು!
ಕಾಲ, ದೇಶ, ನಾಕ, ನರಕ,
ದುಃಖಸುಖಗಳೆಲ್ಲ ಸೇರಿ
ಚನ್ನೆಯಾಡುತಿದ್ದುವು;
ಋತುಗಳೆಲ್ಲ ನಿಯಮವಗಲಿ
ಕೂಡಿಯಾಳುತಿದ್ದುವು!
ಗಿರಿಯ ಹಸುರಿನೋರೆಯಲ್ಲಿ
ಮರಿಗೆ ಮೊಲೆಯನೂಡುತಿದ್ದ
ಕುರಿಯನೊಂದ ಕಂಡೆನು!
ಅನತಿ ದೂರದಲ್ಲಿಯೊಂದು
ಅರೆಯ ಮೇಲೆ ಕುಳಿತು, ಮರಿಗೆ

ಮೊಲೆಯ ಕೊಡುತಲ್ಲಿದ್ದ ಕುರಿಯ
ನಟ್ಟದಿಟ್ಟಯಿಂದ ನೋಡು-
ತಿದ್ದ ನರನ ಕಂಡೆನು!
ಮತ್ತೆ ನೋಡಲಲ್ಲಿ ಕುಳಿತ
ವ್ಯಕ್ತಿಯಲ್ಲಿ ಶಂಕರಾರ್ಯ
ಯೋಗಿವರನ ಕಂಡೆನು!
ತತ್ತ್ವವೇತ್ತನೊಬ್ಬನಲ್ಲ-
ದಲ್ಲಿ ಯಾರು ಇರಲೆ ಇಲ್ಲ;
ನಿಬಿಡವನಗಳಿಂದ ಮೆರೆವ
ದಟ್ಟವಾದ ಬೆಟ್ಟಗುಡ್ಡ-
ದೋಳಿ ಅಲ್ಲಿ ರಂಜಿಸಿತ್ತು;
ಪ್ರಕೃತಿ ರಮೆಯ ನಗ್ನ ವಿಭವ
ಮನಮೋಹಿಸಿದ್ದಿತು!
ಶಂಕರಾರ್ಯನನ್ನು ನೋಡಿ
ಉಬ್ಬಿ ನಲಿಯಿತೆನ್ನ ಹೃದಯ;
ಆದರಲ್ಲಿ ಮರಿಗೆ ಮೊಲೆಯ
ಕೊಡುತಲಿದ್ದ ಕುರಿಯ ಕಂಡು
ಇನ್ನೂ ಹೆಚ್ಚು ನಲಿಯಿತು!

ಬ್ರಹ್ಮ ನಾನು, ಶಿವನು ನಾನು,
ಲೋಕವೆಲ್ಲ ಬರಿಯ ಮಾಯೆ,
ಎಂದು ಜಗಕೆ ಬೋಧಿಸಿದ್ದ
ಪರಮ ತತ್ತ್ವವೇತ್ತನಲ್ಲಿ
ಮೊಲೆಯನುಣ್ಣುತಿದ್ದ ಕುರಿಯ
ಮುದ್ದುಮರಿಯನೊಲುಮೆಯಿಂದ
ನೋಡುತಿದ್ದುದನ್ನು ಕಂಡು
ಎದೆಯು ನಲಿದು, ಏಕೊ? ಏನೊ?
ಕಣ್ಣಗಂಗೆ ಕೆನ್ನೆಯನ್ನು
ತೊಯ್ದು ಹರಿದು ಹೋಯಿತು!
ಮೋಹವೆಂಬ ತೃಣದ ಕಣವ

ಜ್ಞಾನದಗ್ನಿಯಲ್ಲಿ ದಹಿಸಿ
ಯೋಗಿಯಾದ ಪರಮಗುರುವು
ಕುರಿಯ ಮರಿಯ ಮೋಹದಿಂದ
ನೋಡುತಿದ್ದುದನ್ನು ಕಂಡು
ನಯನದೊರತೆಯೊಡೆದು, ನೀರು
ಸುರಿದು ಹರಿದು ಹೋಯಿತು!

ಪೂತ ಪೊದೆಯೊಳಡಗಿ ನಾನು
ಮಹಿಮೆ ಮಯದ ನೋಟವನ್ನು
ನೋಡಿ ನಲಿದೆನು!
ಕಲ್ಪವೆನಿತು ಜಾರಿಹೋದು
ವೆಂಬುದನ್ನು ಅರಿಯೆ ನಾನು;
ನೋಡಿ ನಲಿದೆನು.
ಸೃಷ್ಟಿ ಮೊಳೆತು ವಿಲಯದಲ್ಲಿ
ಲಯದೊಳಳಿದುದು;
ಮತ್ತೆ ಚಿಗುರಿ ಪೂತು ಕಾತು
ಫಲಿಸಿ ಮೆರೆದುದು!
ಬ್ರಹ್ಮರೆನಿತು ಪೀಠದಿಂದ
ಇಳಿದು ಹೋದರರಿಯೆ ನಾನು:
ನೋಡಿ ನಲಿದೆನು – ನೆರೆ
ಪಾಡಿಯೊಲಿದೆನು;
ಕುರಿಯು ಅಲ್ಲಿ ನಿಂತೆ ಇತ್ತು,
ಮರಿಯು ಹಾಲನುಣ್ಣುತ್ತಿತ್ತು;
ಕಲ್ಲಮೇಲೆ ಶಂಕರಾರ್ಯ
ಕುಳಿತು ನೋಡುತಿದ್ದನು,
ತಲೆದೂಗುತಿದ್ದನು!
ಕವಿಯು ನಾನು ಪೊದೆಯೊಳಡಗಿ
ನಿಂತು ನೋಡುತಿದ್ದೆನು; – ಮೈ
ಮರೆತು ನೋಡುತಿದ್ದೆನು.
ಏತಕಂತು ನೋಡುತಿದ್ದೆ

ಎಂಬುದನ್ನು ಅರಿಯೆನು;
ಅಂತು ನೋಡುತಿದ್ದುದನ್ನು
ಮಾತ್ರ ಎಂದು ಮರೆಯೆನು.
ನಾನೆಂದು ಮರೆಯೆನು!

ಇದ್ದಕಿದ್ದ ಹಾಗೆಯೊಂದು
ವೇದಘೋಷ ಕೇಳಿಬಂತು;
ಬೆರಗಿನಿಂದ ಮೈಯ ಮರೆತೆ
ಮಧುರನಾದವನ್ನು ಕೇಳಿ;
ಮೊಲೆಯ ಕೊಡುತಲಿದ್ದ ಕುರಿಗೆ
ಹಾಲನುಣ್ಣುತಿದ್ದ ಮರಿಗೆ
ಗುರುವು ಶಂಕರಾರ್ಯನಿಂತು
ಮುದ್ದಿನಿಂದ ನುಡಿದನು – ನೆರೆ
ಯಿಂಪುದೋರಿ ನುಡಿದನು!
ಹೃದಯ ತಲ್ಲಣಿಸಿತು ಗುರುವಿ
ನಮರದನಿಯನಾಲಿಸಿ! – ವರ
ವೇದವಾಣಿಯಾಲಿಸಿ!
ತತ್ತ್ವವೇತ್ತ ನುಡಿದುದೇನು?
ಆರ್ಯವರ್ಯನೆಂದುದೇನು?
ಬ್ರಹ್ಮ ನಾನು ಎನ್ನಲಿಲ್ಲ,
ಲೋಕ ಮಾಯೆ ಎನ್ನಲಿಲ್ಲ;
ಪ್ರೇಮ ಮೋಹವಿವುಗಳೆಲ್ಲ
ದುಷ್ಟವೆನ್ನಲಿಲ್ಲವು – ಸಲೆ
ಕಷ್ಟವೆನ್ನಲಿಲ್ಲವು!
ವೇದಮಂತ್ರ ಹೇಳಲಿಲ್ಲ;
ಉಪನಿಷತ್ತನುಸುರಲಿಲ್ಲ!
ಪ್ರೇಮದಿಂದ ಕುರಿಯ ಮರಿಯ
ಕಂಡು, ಮನವ ಮೋಹಿಪಂಥ
ಹಳ್ಳಿ ಜನರ ಮುದ್ದು ಹಾಡ-
ನೊಂದ ಹಾಡಿದ – ನಲಿ

ದಾಡಿ ಹಾಡಿದ!
ಶಿಷ್ಯರೊಬ್ಬರಲ್ಲಿ ಇಲ್ಲ;
ಗುರುವು ಎಂಬ ಹೆಮ್ಮೆ ಇಲ್ಲ;
ಹಾಡಿ ಹಾಡಿ ಹಿಗ್ಗಿದ – ನಲಿ
ದಾಡಿಯಾಡಿ ಹಿಗ್ಗಿದ!
ಅಂದು ತಾನು ಕಠಿನ ತಪದ
ಕಟ್ಟೆ ಕಟ್ಟಿ ಬಂಧಿಸಿದ್ದ
ಮೋಹ ಭಾವರಸಗಳೊರತೆ
ಏರಿಯೊಡೆದು ರಭಸದಿಂದ
ಹರಿ ಹರಿದು ಹೋಯಿತು – ಸುರಿ
ಸುರಿದು ಹೋಯಿತು:
"ಮೊಲೆಯನೂಡು, ಊಡು ಕುರಿಯೆ!
ಹಾಲನುಣ್ಣು, ಉಣ್ಣು ಮರಿಯೆ!
ನೋಡಿ ನಲಿವೆನು – ನಾ
ನೋಡಿ ನಲಿವೆನು!
ಬ್ರಹ್ಮತನವ ಪಡೆಯಲೆಂದು
ಬ್ರಹ್ಮಹರ್ಷಕೆಳಸಿ ನಾನು
ಮುಗುದ ಹರುಷವರಿಯೆನು – ಸಂ
ತಸದ ಉರಿಯನರಿಯೆನು!
ನಿಮ್ಮ ನೋಡಿ ನಲಿವೆನೈ – ಕೂ
ಡಾಡಿ ನಲಿವೆನೈ!
ಹಾಡಿಹಾಡಿ ನಲಿವೆನೈ – ನಲಿ
ದಾಡಿಯೊಲಿವೆನೈ!
ಮೊಲೆಯನೂಡು, ಊಡು ಕುರಿಯೆ,
ಹಾಲನುಣ್ಣು, ಉಣ್ಣು ಮರಿಯೆ;
ನೋಡಿ ಹಾಡಿ ನಲಿವೆನು!
ನೀನು ಮೊಲೆಯನೂಡಲೆಂದು,
ಮರಿಯು ಹಾಲನುಣ್ಣಲೆಂದು,
ನಾನು ನಿಮ್ಮ ನೋಡಲೆಂದು
ಬೊಮ್ಮ ಜಗವ ರಚಿಸಿದ!

ಇದಕೆ ರಾಮ ಜಗದಿ ಜನಿಸಿ
ರಕ್ಕಸರನು ಕೊಂದು ಹೋದ;
ಇದಕೆ ಹುತ್ತವೊಡೆದು ಬಂದ
ವ್ಯಾಧಋಷಿಯು ಬರೆದನು – ವರ
ವೇದವ್ಯಾಸನೊರೆದನು!
ಇದಕೆ ಕೃಷ್ಣನುದಯವಾಗಿ
ಕುರುಕ್ಷೇತ್ರ ಕದನದಲ್ಲಿ
ಗೀತೆಯನು ಹಾಡಿದ – ಗೋ
ಪಾಲನಾಗಿಯಾಡಿದ!
ನೀನು ಮೊಲೆಯನೂಡಲೆಂದು,
ಮರಿಯು ಹಾಲನುಣ್ಣಲೆಂದು,
ನಾನು ನೋಡಿ ನಲಿಯಲೆಂದು,
ಬುದ್ಧದೇವ ಜನಿಸಿದ!
ಇದಕೆ ಚಾಗ, ಇದಕೆ ಯೋಗ,
ಇದಕೆ ಉಪನಿಷತ್ತು, ವೇದ;
ಇದಕೆ ಸೂರ್ಯ, ಇದಕೆ ಚಂದ್ರ,
ಇದಕೆ ತಾರೆಯಾವಳಿ!
ಇದನೆ ಮಾಯೆ ಎಂದು ಕರೆದೆ,
ಇದನೆ ಮಾಯೆ ಎಂದು ಬರೆದೆ;
ಇದಕೆ ಬರೆದೆ, ಇದಕೆ ಬರೆದೆ,
ಬ್ರಹ್ಮಸೂತ್ರ ಭಾಷ್ಯವ!
ನೀನು ಮೊಲೆಯನೂಡಲೆಂದು,
ಮರಿಯು ಹಾಲ ಕುಡಿಯಲೆಂದು,
ನಾನು ನೋಡಿಯುಲಿಯಲೆಂದು,
ಶಂಕರಾರ್ಯನಾದೆನು!
ಮೊಲೆಯನೂಡು, ಊಡು ಕುರಿಯೆ,
ಹಾಲನುಣ್ಣು, ಉಣ್ಣು ಮರಿಯೆ,
ನೋಡಿ ನಲಿಯೊ, ಶಂಕರ!
ನಿಮ್ಮನೆಲ್ಲ ನೋಡಿ ನಲಿವೆ
ಮಾಯೆಯೊಡನೆ ಆಡುತ!”

ಪರಮ ಗುರುವ ದಿವ್ಯವಾಣಿ
ವಿಶ್ವಗರ್ಭದಲ್ಲಿ ಮೊರೆದು
ಅಡಗಿ ಮೌನವಾಯಿತು!
ಅರಿಯದೂರ ಗಿರಿಯ ಶಿಖರ
ರವ ವಿಹೀನವಾಯಿತು!
ಎನ್ನ ಎದೆಯು ಕಂಪಿಸಿತ್ತು;
ಕಣ್ಣ ನೀರು ಸುರಿಯುತಿತ್ತು;
ಕುರಿಯು ಮೊಲೆಯ ಕೊಡುತಲಿತ್ತು;
ಮರಿಯು ಹಾಲ ಕುಡಿಯುತಿತ್ತು;
ಶಂಕರಾರ್ಯನವುಗಳನ್ನು
ನೋಡುತಿದ್ದನು!
ಕಣ್ಣು ತೆರೆದೆ! ಬರಿಯ ಕನಸು!
ಅರಿಯದೂರ ಗಿರಿಯು ಇಲ್ಲ!
ಕುರಿಯು ಇಲ್ಲ; ಮರಿಯು ಇಲ್ಲ!
ಗುರುವು ಶಂಕರಾರ್ಯನಿಲ್ಲ!
ನಾನು ಅಡಗಿದಂಥ ಪೊದೆಯು
ಮಾಯವಾಗಿ, ಶಯನವಾಗಿ
ಅಲ್ಲಿ ಹೊರಳುತಿದ್ದೆನು!
ಹೊತ್ತು ಮೂಡಿ ಕಿಟಕಿಯಿಂದ
ಕಿರಣದೂತರೋಡಿ ಬಂದು
ಕರೆಯುತಿದ್ದರೆನ್ನನು!
ದೂರದಲ್ಲಿ ಹಕ್ಕಿಯೊಂದು
ಉದಯರಾಗದಿಂಪ ಬೀರಿ
ಕರೆಯುತಿದ್ದಿತೆನ್ನನು!

೧೩-೦೭-೧೯೧೭

## ವನಗಾಯಕ

ಉದಯ ಗಗನದಲಿ ಅರುಣನ ಛಾಯೆ
ಜಗದ ಜೀವನಕೆ ಚೇತನವೀಯೆ
ನಿನ್ನಯ ಗಾನದ ಸುಮಧುರ ಮಾಯೆ
ಬನದಿಂದಂಬರಕೇರುವುದು:
ಕೋರಿಕೆಗಳ ಬಾಯಾರುವುದು.
ಪ್ರಭಾತಮೌನವನೆಚ್ಚರ ಮಾಡಿ
ಕಾಡು ನಾಡುಗಳ ತುಂಬಿ ತುಳುಕಾಡಿ
ಜಗನ್ನಿದ್ರೆಗೆ ಜೋಗುಳ ಹಾಡಿ
ಬ್ರಹ್ಮವನೇ ತೂಗಾಡುವುದು;
ಕ್ರಾಂತಿಗೆ ಶಾಂತಿಯನೂಡುವುದು.

ಓ ವನಗಾಯಕ ವರವಾಗೀಶ,
ನಿನ್ನಾ ಕಾನನ ಕೂಜನ ಪಾಶ
ಕಬ್ಬಿಗನಿಗೆ ಮುಕ್ತಿಯ ಆವೇಶ:
ಸ್ಮರ ಚಾಪಕೆ ನೀ ಸ್ವರಬಾಣ!
ಕೇಳಿದರಲ್ಲದೆ ತಿಳಿಯದು ನಿನ್ನ
ಕಂಠದ ವೈಖರಿ. ತುದಿಯಲಿ ನನ್ನ
ಸಾವಿನ ಬಯಕೆಯು ನಿನ್ನಾ ಗಾನ:
ನಿನಗೆ ನಮೋ ಓ ಕಾಜಾಣ!

೦೩-೦೫-೧೯೩೧

## ನನ್ನ ಕವಿತೆ

ನನ್ನ ಕವಿತೆಯು ‘ನನ್ನ ಕವಿತೆ’
ನನ್ನವಳೆ ಎಂದೆಂದಿಗೂ!
ನನ್ನ ಕವಿತೆಯು ನೀನು ಕಾಣೆ;

ದೇವರಾಣೆಗು ನೀನು ಕಾಣೆ:
ನನ್ನವಳೆ ಅವಳೆಂದಿಗೂ!

ರನ್ನ ಪಂಪರು ಕಾಣಲಿಲ್ಲ
ನನ್ನ ಕವಿತೆಯ ಕಣ್ಣನು.
ಬೇರೆ ಯಾರೂ ಕಂಡುದಿಲ್ಲ;
ನಾನು ಬಲ್ಲೆನು ಕಂಡುದಿಲ್ಲ
ನನ್ನ ಕಬ್ಬದ ಹೆಣ್ಣನು!

ಅವರಿಗಿದ್ದಳು 'ಅವರ ಕವಿತೆ'
ನನ್ನ ಕವಿತೆಯ ನಂಟರು.
ಅತ್ತೆಮಾವದಿರಿದ್ದರವರು,
ಭಾವಮೈದುನರಿದ್ದರವರು,
ನನ್ನ ಕವಿತೆಯ ನಂಟರು!

ನನ್ನ ಕವಿತೆಯು ಚೆಲುವೆ ನನಗೆ,
ಚೆಲುವೆಯರು ಇನ್ನಿದ್ದರೂ!
ನಿನ್ನ ಕವಿತೆಯ ನಾನು ಕಾಣೆ,
ನನ್ನ ಕವಿತೆಯ ನೀನು ಕಾಣೆ,
ನನ್ನವಳೆ ಎಂದಿದ್ದರೂ!

ನನ್ನ ಕವಿತೆಗೆ ಎರಡು ಕಣ್ಣು,
ನನ್ನ ಕವಿತೆಗೆ ಮೈಯಿದೆ!
ನನ್ನ ಕವಿತೆಯ ಕೆನ್ನೆ ನುಣ್ಪು!
ನನ್ನ ಕವಿತೆಯ ಮುತ್ತು ತಣ್ಪು!
ನನ್ನ ಕವಿತೆಗೆ ಕೈಯಿದೆ!

ನನ್ನ ಕವಿತೆಯ ನಾನು ದಿನವೂ
ಮುಗಿಲಿನಲಿ ಮೈ ತಬ್ಬುವೆ!
ಮಿಂಚುವೊಳೆಯಲಿ ಮುಳುಗಿ ಮಿಂದು,

ಸಿಡಿಲಿನೂಟವನುಂಡು ಬಂದು
ನನ್ನವಳ ನಾ ತಬ್ಬುವೆ!

ನವಿಲುಗರಿಗಳ ಬಣ್ಣಗಣ್ಣು
ಅವಳ ಬಿಂಕದ ಸೀರೆಯು!
ಕಂಡು ಹೇಳುವೆ, ಕೊಂಚ ನಿಲ್ಲು –
ಏಳುಬಣ್ಣದ ಮಳೆಯ ಬಿಲ್ಲು
ಅವಳ ಕೊರಲಿನ ಹಾರವು!

ಎನಿತು ಚೆಲುವಿರಲೇನು ನಿನಗೆ
ನೀನು ಕಾಣದ ಹೆಣ್ಣಲಿ?
ನಾನು ಬಣ್ಣಿಸುತಿದ್ದರಿಂತು
ಚಿಮ್ಮಿ ದೂರಕೆ ಬಳುಕಿ ನಿಂತು
ನಾಚಿ ಮುನಿವಳು ಕಣ್ಣಲಿ!

ನನ್ನ ಕವಿತೆಯು 'ನನ್ನ ಕವಿತೆ'
ನನ್ನವಳೆ ಎಂದೆಂದಿಗೂ!
ನನ್ನ ಕವಿತೆಯ ನೀನು ಕಾಣೆ;
ದೇವರಾಣೆಗು ನೀನು ಕಾಣೆ;
ನನ್ನವಳೆ ಅವಳೆಂದಿಗೂ!

೨೧-೦೫-೧೯೩೦

## ಬಣ್ಣದ ಚಿಟ್ಟೆ

ಪೂವಿಂ ಪೂವಿಗೆ ಚಿಮ್ಮುತ ಹಾರಿ
ಸುಮಹೃದಯದ ನವಮಧುವನು ಹೀರಿ
ಬನಗಳ ಬಣ್ಣದ ಕವಿತೆಯದೊಂದು
ಮುದ್ದನು ಸೂಸಿತು ನನ್ನಡೆ ಬಂದು!
ಸುಗ್ಗಿಯ ತಿಂಗಳ ಹೂವುಗಳೆಲ್ಲ,
ಇಂದಿರವಿಲ್ಲಿನ ರಾಗಗಳೆಲ್ಲ

ಬಣ್ಣದ ಚಿಟ್ಟೆಯ ರೆಕ್ಕೆಯ ಮೇಲೆ
ಕುಣಿದವು, ಕಬ್ಬಿಗ ಮುದದಲಿ ತೇಲೆ!
ನೇಸರು ಮೆರೆದನು ಬಾಂದಳದಲ್ಲಿ;
ಹಕ್ಕಿಗಳುಲಿದುವು ಬನ ಬನದಲ್ಲಿ;
ಸಾವಿರ ಸುಮಗಳು ತರುಲತೆಗಳಲಿ
ತಲೆದೂಗಿದ್ದುವು ತಂಗಾಳಿಯಲಿ:
ಬಾನೂ ಬನವೂ ತಿರೆಯೂ ಗಿರಿಯೂ
ಎಲ್ಲವೂ ಚಿಟ್ಟೆಯ ಸಲುವಾಗಿ
ಯಾರೋ ರಚಿಸಿದ ರಂಗದ ತೆರದಲಿ
ಮೆರೆದುವು ಕಣ್ಣಿಗೆ ಚೆಲುವಾಗಿ!

೦೮-೦೫-೧೯೨೯

## ಸೊನ್ನೆ

ಸೊನ್ನೆ, ನಿನಗೆ ಬೆಲೆಯೆ ಇಲ್ಲ
ಎಂದು ಬರಿದೆ ಬೈವರೆಲ್ಲ!
ನಿನ್ನ ಹಿಂದೆ 'ಒಂದು' ನಿಲಲು
ನಿನಗೆ ಬೆಲೆಯು ಬರುವುದು,
'ಒಂದು' ಬೆಂಬಲವಿರೆ ಸೊನ್ನೆ
ಕೋಟಿಗಳನು ತರುವುದು!

ಸೃಷ್ಟಿ ಶಿವನ ಶೂನ್ಯ ಲೀಲೆ,
ಮಾಯೆ, ಬರಿಯ ಸೊನ್ನೆ ಮಾಲೆ:
ಎಂದು ನುಡಿವರರಿತರೆಲ್ಲ!
ಆದರೇನು ಸತ್ಯವೆ?
ಹಿಂದೆ 'ಒಂದು' ನಿಲಲು ಬಂದು
ಸೊನ್ನೆಮಾಲೆ ಮಿಥ್ಯವೆ?

ಸೃಷ್ಟಿಯೇನೊ ಸೊನ್ನೆ ಮಾಲೆ?
ಶಿವನು 'ಒಂದು' ಬೆನ್ನುಮೂಳೆ!

ಹಿಂದೆ ‘ಒಂದು’ ನಿಲಲು ಬಂದು
ಸೊನ್ನೆ ಸಿರಿಗೆ ನೆಲೆಮನೆ!
ಹಿಂದೆ ಶಿವನ ಪಡೆದ ಭುವನ –
ಮಾಯೆ ನನ್ನಿಗೆಲೆವನೆ!

೦೪-೦೪-೧೯೩೦

## ನೀನೆಂತು ಪೊರೆವೆಯೋ........

ನೀನೆಂತು ಪೊರೆವೆಯೋ ಅದನು ನಾನರಿಯೆ;
ನೀ ಪೊರೆವೆ ಎಂಬುದನು ಮಾತ್ರ ನಂಬಿರುವೆ.

ಗಜಪತಿಯ ಮೊಸಳೆಯಿಂ ನೀನಂದು ಪೊರೆದಂತೆ
ತೆಕ್ಕನೆಯ ಮೈದೋರಿ ಪೊರೆಯದಿರಬಹುದು;
ಮುಂಡಿಗೆಯನೊಡೆದು ಬಂದಂದು ಪ್ರಹ್ಲಾದನನು
ಸಲಹಿದಂದದೊಳೆನ್ನ ಸಲಹದಿರಬಹುದು.

ಬಿಸಿಲ ಬೇಗೆಗೆ ಬೆಂದು ಬಸವಳಿದ ಬನದೆಡೆಗೆ
ಹೊಸ ಮುಗಿಲ ಮಳೆಯಂತೆ ನೀ ಬರಲುಬಹುದು;
ರವಿಯ ಹೊಂಬೆಳಕಂತೆ, ಶಶಿಯ ಕೌಮುದಿಯಂತೆ
ಸೌಂದರ್ಯರೂಪದಲಿ ಬಳಿಗೆ ಬರಬಹುದು.

ಮುದ್ದು ಗೆಳೆಯರ ಮೊಗದ ಮುದ್ದಿನ ಮುಗುಳ್ನಗೆಯ
ಮಾಧುರ್ಯದಂದದಲಿ ನೀ ಬರಲುಬಹುದು;
ಕಬ್ಬವೆಣ್ಣಿನ ಕಣ್ಣ ಮಿಂಚಿನೊಲ್ಮೆಯ ತೆರದಿ
ಪ್ರತಿಭೆಯಂದದಿ ಸೊಗವ ಬಳಿಗೆ ತರಬಹುದು.

೧೯-೦೨-೧೯೨೯

# ಯಾತ್ರೆ

ಯಾವ ಮಹಾಗತಿಗೆನ್ನನು ಕೈಹಿಡಿದನುದಿನ ನಡೆಸುತಿಹೆ?
ಯಾವಾನಂದವನೆನಗಾಗಡಗಿಸಿ ಕರೆಕರೆದೆಳೆಯುತಿಹೆ?
ಭಾವನೆಗಸದಳವಾದ ವಿಮೋಚನವಾವುದನನುಗ್ರಹಿಪೆ?
ಯಾವ ರಹಸ್ಯವನಾವ ರಹಸ್ಯದಿ ಮೋಹಿಸಲೆಳಸುತಿಹೆ?

"ಕೈಬಿಡು ತಾಯೇ" ಎನ್ನುತಲಡಿಗಡಿಗೊರಲುವೆ, ಜಗದಂಬೆ;
ಚುಂಬಿಸುತಡಿಗಡಿಗೆನ್ನನು ಮುಂದಕೆ ಸಾಗಿಪೆ ಸಂತಯಿಸಿ.
ಚುಂಬನದಾ ಮಳೆ ತೋಯಿಸುತೆನ್ನನು ಹರಿಹರಿದೋಡುತಿದೆ,
ಯಾತ್ರಿಕರೆಲ್ಲರು ಬಂದಾ ತೀರ್ಥದಿ ಮುಳುಮುಳುಗೇಳುವರು.

"ಪೋಗುವುದೆಲ್ಲಿಗೆ ತಾಯೇ" ಎನ್ನಲು "ತವರೂರಿಗೆ" ಎಂದೆ.
ತವರೂರೆಂಬುದದಾವುದು? ನೀನಿರುವೆಡೆಯೇ ತವರೂರು!
ಸುತ್ತಲು ತಿಮಿರವು ಕವಿದಿದೆ; ಬೋರೆಂದನಿಲನು ಘರ್ಜಿಪನು;
ಧಾರಿಣಿಗಗನಳೆರಡನು ಮಾಯೆಯು ಬಂಧಿಸಿದಂತಿಹುದು.

ಭೀಕರಮಾದೀ ನಿರ್ಜನ ದೇಶದೊಳಲ್ಲಿಗೆ ಜನನೀ ಪೋಗುತಿಹೆ?
ಕಂಟಕಶಿಲೆಗಳ ತುಳಿಯುತಲೆಣಿಕೆಗೆ ತಾರದೆ ರೋದನವ
ಯಜ್ಞವದಾವುದನೆನ್ನಿಂದೆಸುಗುವೆ ಪೇಳೌ, ಜಗದಂಬೆ?
ಪರಮರಹಸ್ಯವನುಸುರದೆ ಪರಗತಿಗೆನ್ನನು ನೂಂಕುತಿಹೆ.

ದಾರಿಯ ನಡೆನಡೆದಾಯಾಸದಿ ನಾನೊರಗಲು ಭೂತಳಕೆ
ವಾತ್ಸಲ್ಯದಿ ನೀ ಕರಗಳಲೆತ್ತುವೆಯೆನ್ನನು ಉರದೆಡೆಗೆ!
ಅಹಹಾ! ಲೀಲೆಯದೇನಿದು ತವರೂರತಿದೂರಿದೆಯೆಂಬ,
ತವರೂರನುದಿನ ನಿನ್ನುರವಾಗಿರೆ, ದೇವೀ ಜಗದಂಬೆ?

೧೯೨೭

# ಕಲ್ಪನಾಸುಂದರಿ

ಕಠಿನ ಕಟು ಭುವನ ಮಂಡಲವೆಲ್ಲ ಕಂಪಿಸುತೆ
ಕನಸಾಗುವುದು ನಿನ್ನ ವಿದ್ಯುದ್ವಿಲಾಸದಲಿ;
ನೀರಸ ಜಗಜ್ಜೀವನದಿ ಸವಿಯ ಸಿಂಪಿಸುತೆ
ಬಂಧಿಸುವೆ ಜೀವಗಳನಿಂದ್ರಧನು ಪಾಶದಲಿ;
ನಿನ್ನ ಕೋಮಲ ಬಾಹುಲತೆಗಳಾಲಿಂಗನದಿ,
ನಿನ್ನ ಕೆಂದುಟಿಯ ಚುಂಬನದಿ, ನಿನ್ನಿನಿದೆದೆಯ
ತಾಪಹಾರಕ ದಿವ್ಯ ಸುರಸುಧಾ ಸ್ಪರ್ಶದಲಿ,
ನಿನ್ನ ನಯನ ಸರೋಜ ಮಧುರ ಉನ್ಮೀಲನದಿ,
ಓ ಕಲ್ಪನಾಸುಂದರಿಯೆ, ಹೀರಿ ಮಧುಸುಧೆಯ
ಸೃಷ್ಟಿ ನರ್ತನಗೈಯುತಿದೆ ಮತ್ತ ಹರ್ಷದಲಿ!

ಮನುಜ ಮಾನಸ ನಾಕದಪ್ಸರಸಿ ಉರ್ವಶಿಯೆ,
ಹೃದಯದಮರಾವತಿಯ ಚಿರಯೌವನೆಯು ನೀನು.
ನಿನ್ನ ಕಾಲ್ಗೆಜ್ಜೆಗಳ ಕಿಂಕಿಣಿಗೆ, ರೂಪಸಿಯೆ,
ವಿಶ್ವದಾಸ್ಥಾನದಲಿ ತಾರಾಳಿ ಶಶಿ ಭಾನು
ನೀಹಾರಿಕೆಗಳೆಲ್ಲ ಹಿಮ್ಮೇಳಗೈಯುತಿವೆ
ಕರತಾಳವಿಕ್ಕಿ, ಹಗಲಿರುಳುಗಳು ಬಲವಂದು
ಸುತ್ತುತಿವೆ ಭೂವಲಯವನು ರಾಸಕ್ರೀಡೆಯಲಿ.
ಭೂತಭವಿಷದ್ವರ್ತಮಾನಗಳು ನೆಯ್ಯುತಿವೆ
ಸ್ವರ್ಗೀಯ ನವ್ಯವನು! ಭವ್ಯ ಜೀವನ ಬಂಧು,
ನಗಿಸುತಿಹೆ ಸಂಸಾರವನು ಮಿಳ್ತು ದಾಡೆಯಲಿ!

ಓ ಚಿರಂತನ ಸಖಿಯೆ, ಯುಗಯುಗಗಳಾಚೆಯಲಿ
ಪೊಡವಿತಾಯಿಯ ಬಸಿರ ಬೆಂಕೆತೊಟ್ಟಿಲೊಳುದಿಸಿ
ಶಿಶು ನರನು ಕಣ್ದೆರೆದು ನಿನ್ನ ಕೈಚಾಚಿನಲಿ
ಹಜ್ಜೆಯಿಡೆ ಕಲಿತಂದಿನಿಂದೆನ್ನೆಗಂ, ಕುದಿಸಿ
ಕನಸುಗಳನವನಾತ್ಮದಲಿ, ಮುಂದು ಮುಂದಕ್ಕೆ
ಸೆಳೆದು ಸಂಮೋಹಿಸಿಹೆ ರಮ್ಯದರ್ಶನವಿತ್ತು,

ಭುವನ ಯಾತ್ರಿಕರ ಹೇ ಸರ್ವದಾ ಸಂಗಿನಿಯೆ!
ಪುಷ್ಪಕ ವಿಮಾನವಲೆ ನಿನ್ನ ಮಿಂಚಿನ ರೆಕ್ಕೆ?
ನರಗೆ ನಿನ್ನಿಂದೈಸೆ ತವಿಯದಿಹ ಸಂಪತ್ತು,
ಚಿತ್ತ ಸಾಗರ ಮಥನ ಜಾತ ರಸಯೋಗಿನಿಯೆ!

ಉದಯ ಅಸ್ತಾದ್ರಿಗಳ ಉದಯಾಸ್ತದೈಸಿರಿಗೆ
ನೀನೆ ಚೇತನದುಸಿರು, ಹೇ ಧ್ಯಾನಮಾಧುರಿಯೆ!
ಚೈತ್ರಕಾನನ ಕುಸುಮ ಮಂಜರಿಯ ಕೇಸುರಿಗೆ
ನೀನೆ ಮಿಂಚಿನ ಕಿಡಿಯು, ಕಾವ್ಯ ಶ್ರೀ ಸೋದರಿಯೆ!
ನಿನ್ನಿಂದೆ ಚಿರನವೀನೆಯು ಪ್ರಕೃತಿ; ನಿನ್ನಿಂದೆ
ಕೈಗೂಡುತಿದೆ ಭುವನ ಜೀವನಕೆ ಸಾರ್ಥಕತೆ;
ನೀನಿಲ್ಲದಿರೆ ಬಾಳ್ಗೆ ಕಗ್ಗತ್ತಲೆಯೆ ಕಣ್ಣು!
ವಿಧುರ ವಿರಹದಲಿ ನೀನಾಸೆ ತೋರುವೆ ಮುಂದೆ
ಸುರಚಾಪ ಸ್ವರ್ಗವನತೀತದಲಿ ನಿರ್ಮಿಸುತೆ;
ಮಧುರ ಮಿಲನದಿ ನೀನೆ ಹೆಣ್ದುಟಿಯ ಸವಿಹಣ್ಣು!

ವಾಲ್ಮೀಕಿಯನ್ನೊಲಿದು ರಾಮಾಯಣವ ಮಾಡಿ
ವ್ಯಾಸಋಷಿಯಿಂ ಮಹಾಭಾರತವನಾಗಿಸಿದೆ;
ಶಿಲ್ಪಕವಿಗಳನಪ್ಪಿ ಶಿಲೆಯ ಗಾನನ ಹಾಡಿ
ತತ್ತ್ವಜ್ಞರಿಂ ದರ್ಶನಂಗಳನು ವಿರಚಿಸಿದೆ.
ವಿಜ್ಞಾನಿ ಸೀಮಾವಿಹೀನಾಂತರಿಕ್ಷದಲಿ
ನಕ್ಷತ್ರ ನೀಹಾರಿಕಾ ಮರ್ಮಗಳನೆಲ್ಲ
ನಿನ್ನಿಂದೆ ಕಂಡಿಹನೆಲೌ ಮತಿಯ ರತಿರಾಣಿ!
ಸತ್ಯ ಸೌಂದರ್ಯವಹುದೌ ನಿನ್ನ ವಕ್ಷದಲಿ,
ಮೃತ್ಯು ಚಿತ್ತಾಗುವುದು! ನೀನಿಲ್ಲ ಸುಖವಿಲ್ಲ;
ಬ್ರಹ್ಮ ಮಾಯಾ ಪ್ರೇಯಸಿಯೆ, ಪರಮ ಕಲ್ಯಾಣಿ!

ಇಂದ್ರಿಯಗಳಿಂದ್ರಧನುರ್ಧಾರಿಣಿಯೆ ಇಂದ್ರಾಣಿ,
ನನ್ನನೆದೆಗಪ್ಪು ಬಾ! ಸ್ವಪ್ನದೋಲದಿ ತೂಗಿ
ವಿಸ್ಮೃತಿ ಗಾನಗೈ! ಜನ್ಮಮೃತ್ಯು ಗ್ಲಾನಿ
ಮಾಯವಾಗಲಿ "ನಾನು" ಆನಂದಲಯವಾಗಿ!

ಮಥಿಸು ನನ್ನನು ಮಸಗಿದಂಬುಧಿಯ ತೆರೆಗಳಲಿ;
ನುಂಗಲೆನ್ನನು ಭವ್ಯ ಭೂಮಕಾನನ ಸುಪ್ತಿ;
ನೊಣೆಯಲೆನ್ನನು ಶೂನ್ಯ ಸ್ನಿಗ್ಧ ಮಧುರ ಸಮಾಧಿ!
ಓ ಪ್ರಾಣ ಪ್ರಣಯಿನಿಯೆ, ಬಳಿಗೆ ಬಂದೆನು ಬಳಲಿ –
ಬರಲೆನಗೆ ನಿನ್ನೆದೆಯ ಸೋಮಪಾನದ ತೃಪ್ತಿ:
ಮಾಧುರ್ಯ ನಿರ್ವಾಣ ಸಿದ್ಧಿಯ ಮಹಾಬೋಧೀ!

೦೪-೧೦-೧೯೩೨

## ಮೊದಲ ಚರಣಗಳು


ಅಗಣಿತ ತಾರಾಗಣಗಳ ನಡುವೆ / ೭

ಅರಿಯದೂರ ಗಿರಿಗಳಲ್ಲಿ / ೧೫

ಉದಯ ಗಗನದಲಿ ಅರುಣನ ಛಾಯೆ / ೧೪

ಎಲ್ಲ ನಶಿಸುವುದು; ವರಕಲೆಯೊಂದೇ / ೫೨

ಓ ನನ್ನ ತುಂಗೆ, / ೬೭

ಕಠಿನ ಕಟು ಭುವನ ಮಂಡಲವೆಲ್ಲ ಕಂಪಿಸುತೆ / ೭೨

ಕಡಲ ತಡಿಯ ಮಳಲ ಗುಡಿಯ / ೫೩

ಕರೆಯುತಿದೆ ಓ ದೂರದಾಹ್ವಾನವಾಣಿ! / ೨೮

ಕಾಡಿನ ಮೂಲೆಯ ಕೆರೆಯ ಕೆಸರಿನಲಿ / ೫೪

ಕೆಚ್ಚಿರುವುದಾತ್ಮದಲಿ / ೫೮

ಕೇಳುವುದೆಲ್ಲೆಡೆ ಪಲ್ಲವಿಯೊಂದು: / ೩೪

ಕೊಂದರೂ ಕೊಂದಿಲ್ಲ, / ೨೩

ಗುಟ್ಟನರಿತು ಸುಮ್ಮನಿರು; / ೫೮

ತಿಮಿರ ವಸನ ಧಾರಿಣಿ ನಿಶೆ / ೮೦

ನನ್ನ ಕವಿತೆಯು ‘ನನ್ನ ಕವಿತೆ’ / ೧೨

ನನ್ನ ಕೈಯಲ್ಲಿರುವ ಕಲ್ಲಿಗೆ / ೫೦

ನನ್ನನು ನಿನ್ನಯ ಕೊಳಲನು ಮಾಡು, / ೯

ನಿನ್ನ ಕೈಲಿಹ ಕೈದು ನಾನು ! / ೬೬

ನಿನ್ನೆಳೆಯ ಮೊಗದಲ್ಲಿ ನಸುಮುಗುಳು ನಗೆಬಳ್ಳಿ / ೬೯

ನೀನಂದು ಹಾಡೆಂದು ಕಲಿಸಿ ಕಳುಹಿದ ಗೀತೆ / ೩೬

ನೀರದೇಕೆ ಹರಿವುದು? / ೩೯

ನೀನೆಂತು ಪೊರೆವೆಯೋ ಅದನು ನಾನರಿಯೆ; / ೫೬

ನೀ ಹೇಳೆ ನಾ ಬರೆದೆ, / ೨೫

ನುಡಿದು ನುಡಿದು ಮೂಕನಾದೆ; / ೪೧

ನೂರಾರು ಹೀನದಲಿ ನೀನೆನ್ನ ನೂಕುತಿಹೆ; / ೩೩

ಪಡುವಲೆಡೆಗೆ ಹೊರಳಿ ಹೊತ್ತು / ೬೦

ಪರಮ ಪುರುಷನದಾವ ಹಹಿಮೆಯ / ೨೯

ಪೂವಿಂ ಪೂವಿಗೆ ಚಿಮ್ಮುತ ಹಾರಿ / ೧೧

ಬನದಲಿ ದಿನ ದಿನ ಬಣ್ಣದ ಹೂಗಳು / ೧೦

ಬಾ ಬಾ ದೊರೆ, ಬಾಗಿಲ ತೆರೆ; / ೨೪

ಬಿದಿ ಕಮ್ಮಾರನು; ಲೋಕವೆ ಕುಲುಮೆ. / ೩೮

ಬುವಿಯು ಸೆರೆಮನೆಯೆಂದು / ೩೫

ಭಾವನೆಯ ಬಾನಿನಲಿ ಇಂದ್ರಧನುರ್ಯಾನದಲಿ / ೨೬

ಮೇಲೆ ಗಗನ ನೀಲತಲ, ಕೆಳಗೆ ತಿರೆಯ ಹಸುರು ನೆಲ, / ೧

ಯಾವ ಮಹಾಗತಿಗೆನ್ನನು ಕೈಹಿಡಿದನುದಿನ ನಡೆಸುತಿಹೆ? / ೫೫

ವಾಮನ ಸ್ವರೂಪದಲಿ ಬಂದೆ ನನ್ನೆದೆಗಂದು, / ೮

ವ್ಯೋಮ ಮಂಡಿತ ಸಹ್ಯಶೈಲಾಗ್ರದಡವಿಯಲಿ / ೪೪

ಶಿವನ ಕೃಪೆಯದಿರಲಿ ಬಿಡು, / ೫೯

ಸೀಮೆಯಿಲ್ಲದ ಗಗನ ಗಂಭೀರ ನೀಲಿಮೆಯು / ೬೪

ಸೊನ್ನೆ, ನಿನಗೆ ಬೆಲೆಯೆ ಇಲ್ಲ / ೨೨

ಹಗಲೆಲ್ಲ ದೂಳಿನಲಿ ಗೊಂಬೆಯಾಟವನಾಡಿ / ೩೭

ಹುಟ್ಟಿದೆನೇತಕೊ ನಾನರಿಯೆ; / ೩೨

## ತುಂಗೆ

ಓ ನನ್ನ ತುಂಗೆ,
ಸಹ್ಯಪರ್ವತ ತೀರ್ಥ ಪೋಷಿತ ತರಂಗೆ,
ನಿಬಿಡ ವನಮಾಲಿನಿಯೆ, ಪುಣ್ಯಶಾಲಿನಿಯೆ,
ನೋಡಿದನಿತೂ ನಿನ್ನ ನೋಡಿ ನಾ ತಣಿಯೆ.
ನಿನ್ನ ಜನಶೂನ್ಯ ಸೈಕತರಂಗದಲಿ ಅಂದು
ಗೋಧೂಳಿ ಸಮಯದಲಿ, ಸಂಜೆಗೆಂಪೊಳು ಮಿಂದು
ರವಹೀನವಾಗಿರಲು ಶ್ಯಾಮಲ ಸುಷುಪ್ತಿಯಲಿ

ದಡದ ಬನಗಳ ಮಾಲೆ, ನಿಬಿಡ ಕಿಸಲಯ ಶಾಲೆ
ನಗುತಲಿರೆ ಸಂಧ್ಯೆಯಾ ಸ್ವರ್ಣಪ್ರದೀಪ್ತಿಯಲಿ;
ಜಲಶರೀರದಿ ನರ್ತಿಸೆ ತರಂಗಮಯ ಲೀಲೆ,
ನಿನ್ನ ಮಂಜುಲ ವಾಣಿಗೆನ್ನ ಕೊರಲನು ಕೂಡಿ
ಮೈಮರೆತೆ ಮಳಲಾಟ ನೀರಾಟಗಳನಾಡಿ –
ಅಂತು ಆ ಬಾಲ್ಯದಲಿ, ಓ ನನ್ನ ತುಂಗೆ,
ಸಹ್ಯಪರ್ವತ ತೀರ್ಥ ಪೋಷಿತ ತರಂಗೆ!

ಇನ್ನೊಮ್ಮೆ ಇಂದು
ಮರಳಿಹನು ಹೊಳೆಕರೆಗೆ ಯುವಕನೈತಂದು –
ಯುವಕನೆಂಬೆನೆ? ಹಸುಳೆ! ನಿನ್ನೆದೆಯ ತೊಟ್ಟಿಲಲಿ
ನಾನು ಬರಿ ಹಸುಳೆ! ನುಣ್ಣಣೆಯ ಮಳಲೊಟ್ಟಿಲಲಿ
ಕುಳಿತ ನಾನಂದಿನಂತೆಯೆ ಬರಿಯ ಕನಸುಗುಳಿ,
ನವಿರು ನರತೊಡಮಾನು ಹೀಗೆಯೇ ಎಂದು ತಿಳಿ!
ಈ ಬಿಳಿಮಳಲ ರಾಶಿ, ವನಪರ್ಣ ವಾರಾಶಿ,
ನರ್ತಿಸುತ ಪ್ರವಹಿಸುವ ನೀಲಾಭ ಜಲರಾಶಿ,
ನೀಲ ನೀರವ ಶಕುನದಂತಿರುವ ಆಕಾಶ,
ಎಲ್ಲವೂ ನನ್ನ ದೃಷ್ಟಿಗೆ ಆತ್ಮದಾವೇಶ
ಭಾವಗಳು! ಜಡವಲ್ಲ; ಸ್ಥೂಲವಸ್ತುಗಳಲ್ಲ!
ಮೃತ ನಿಸರ್ಗದ ಚೇತನ ವಿಹೀನ ಶವವಲ್ಲ!
ಈಶ್ವರ ಶರೀರದಲಿ ಚಿನ್ಮಯ ಮಹಾಂಗಗಳು;
ಬ್ರಹ್ಮದ ಮಹಾ ಚಿತ್ತಶರಧಿಯ ತರಂಗಗಳು;
ಚಿಂತೆಗಳು ನನ್ನ ಮನದಲಿ; ನನ್ನ ನಾಡಿಯಲಿ
ರಕ್ತಬಿಂದುಗಳು! ನಾನುಸಿರೆಳೆಯೆ ಮೋಡದಲಿ
ಶ್ವಾಸವಾಡುವುದು ! ಅದು ಕಾರಣದಿ ಬಾಲ್ಯದಲಿ
ಮೊದಲ್ಗೊಂಡು ನಾನಿಂದುವರೆಗೂ ನಿತ್ಯದಲಿ –
ಪ್ರಕೃತಿಯಾರಾಧನೆಯೆ ಪರಮನಾರಾಧನೆ;
ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದಸಾಧನೆ,
ಎಂದರಿತು ಉದಯಾಸ್ತಗಳಲಿ, ವನಗಿರಿಗಳಲಿ,
ತೆಂಗಾಳಿಯಲಿ, ರುದ್ರವರ್ಷದಲಿ, ತಿಂಗಳಲಿ,

ಎಳೆಹಸುರ ಮೇಲೆ ಮಿರುಗುವ ಹಿಮದ ಮಣಿಗಳಲಿ,
ಕಾಜಾಣ, ಕಾಮಳ್ಳಿ, ಕೋಗಿಲೆಯ ಗಿಳಿಗಳಲಿ,
ಮಾನವರ ಸೌಂದರ್ಯ ಒಲುಮೆ ನೇಹಂಗಳಲಿ
ನನ್ನಿಷ್ಟದೇವತೆಯ ಗುರ್ಭಗುಡಿಯನು ಕಟ್ಟಿ
ತಲ್ಲೀನನಾಗಿಹೆನು ಪೂಜೆಯಲಿ! ಎದೆಮುಟ್ಟಿ
ಪ್ರಕೃತಿಯನು ಬ್ರಹ್ಮಮಯಿ ಎಂದರಿತು ಒಲಿದವಗೆ,
ಮೇಣು ಆನಂದಮಯಿ ಎಂದೊಲಿದು ಅರಿತವಗೆ
ದುಗುಡವೆತ್ತಣದು? ಶರದಾಗಸದ ನೀಲಿ ನಗೆ
ನಮ್ಮೆದೆಯ ನೂರು ತಾಪವನಳಿಸಿ ಚಿರಶಾಂತಿ
ಔದಾರ್ಯಗಳ ನೀಡುವುದು; ಮಾನಸಿಕ ಕ್ರಾಂತಿ
ತೊಲಗುವುದು; ಕಂಪಿಸುತ ಕರಗುವ ಜಗತ್ತಿನಲಿ
ಧುಮುಕಿ ನಾನೊಂದು ಕಂಪನವಹೆನು ಸತ್ತಿನಲಿ!
ಅದರಿಂದ ಓ ಮಾತೆ, ತುಂಗಾ ತಪಸ್ವಿನಿಯೆ,
ನೋಡಿದನಿತೂ ನಿನ್ನ ನೋಡಿ ನಾ ತಣಿಯೆ!

೧೯-೦೭-೧೯೩೨

## ವನಸುಂದರಿ

ನಿನ್ನೆಳೆಯ ಮೊಗದಲ್ಲಿ ನಸುಮುಗುಳು ನಗೆಬಳ್ಳಿ
ತಳಿರಿಡಿದು ನಳನಳಿಸಿ ಮೆರೆವವೋಲೆ,
ಹಸುರು ಬನಗಳ ಮೇಲೆ ಹಸುಳೆ ಬಿಸಿಲಿನ ಲೀಲೆ
ಹಸನಾಗಿ ಹಸರಿಸಿದೆ ನೋಡು, ಬಾಲೆ!
ತಿಳಿಬಾನಿನಲಿ ನೀಲಿ, ಕೆನೆಮುಗಿಲ ರಂಗೋಲಿ,
ಬನದ ಹಸುರಿನಲಿ ಕುಸುಮಗಳ ಕೇಳಿ;
ನಿನ್ನ ಕೊರಲಿನ ಇನಿಯ ಬಗೆಯ ಕಡೆಯುವ ದನಿಯ
ಕನ್ನಡಿಸಿ ಕರೆಯುತಿವೆ ಪಕ್ಷಿಯಾಳಿ.
ಬನಗಾಳಿ ಐತಂದು ನಿನ್ನ ಕುರುಳಲಿ ನಿಂದು
ಎದೆಯ ಕದಿಯುವ ತೆರದಿ ಬೀಸುತಿಹುದು;

ಪೃಥುಲ ಪಲ್ಲವ ಸಿಂಧು ಪ್ರಥಮ ವರ್ಷದಿ ಮಿಂದು
ಜಲಬಿಂದು ಮಣಿಗಳನು ಸೂಸುತಿಹುದು.

* * *

ನೀನು ಸುಂದರಿ ಎಂಬುದನು ನಾನು ಬಲ್ಲೆ,
ಆದರೂ ನಿನ್ನಿಚ್ಛೆಯನು ಸಲಿಸಲೊಲ್ಲೆ.
ಸೌಂದರ್ಯಕಿಂತಲೂ ಸೌಶೀಲ್ಯ ಹೆಚ್ಚು!
ತಿಳಿದು ತಿಳಿಯಾದುದೌ ನನ್ನೊಲ್ಮೆ ಹುಚ್ಚು!

೧೭-೦೫-೧೯೩೧

## ಉಷೆಯು ನಿಶೆಯ ಚುಂಬಿಸೆ

ತಿಮಿರ ವಸನ ಧಾರಿಣಿ ನಿಶೆ
ಮೆಲ್ಲಮೆಲ್ಲನಸ್ತಮಿಸೆ,
ತರುಣ ಅರುಣ ರಾಗಿನಿ ಉಷೆ
ಪೂರ್ವವನು ವಿರಾಜಿಸೆ;
ವೇಣು ವನದ ಶಿಖರದಲಿ
ಹಸುರ ಕಡಲ ತೆರೆಗಳಲಿ
ಮಿಸುನಿ ನಗೆಯ ಹೊನಲ ಚೆಲ್ಲಿ
ಹಸುಳೆ ಬಿಸಿಲು ಹಸರಿಸೆ;
ಕಲೆಯ ಜಲದಿ ಮೀಯುವೊಡೆ
ಮಲೆಯ ತುದಿಗೆ, ಮನವೆ, ನಡೆ;
ಮೈಯ ಮರೆವ ಮುದವ ಪಡೆ –
ಉಷೆಯು ನಿಶೆಯ ಚುಂಬಿಸೆ!

ಕುಟ್ಮಲಮಯ ಕುಟಜದಲ್ಲಿ
ನಟ ಸಮೀರನೈತರೆ,
ಎಲೆಯ ಹಸುರು ತೊಟ್ಟಿಲಲ್ಲಿ
ಹನಿಯ ಹಸುಳೆ ನಗುತಿರೆ;

ಪ್ರಭು ವಸಂತನೋಲಗದಲಿ
ಮಧುರ ಜಟಿಲ ಕೂಜನದಲಿ
ಚೋರೆ ತೇನೆ ಲಾವುಗೆ ಗಿಳಿ
ಗಾನಗೈಯೆ ಮೇಲದಿ;
ನಾದಶೀಲ ಲೋಲ ಅಳಿ
ಗಾನವಾಗೆ ಜೋಗುಳದುಲಿ,
ಮನವೆ, ತೂಗಿಯಾಡಿ ನಲಿ
ಬಕುಲ ಕುಸುಮ ದೋಲದಿ!

ರಮಣಿ ಕದಳಿ ಅವನತ ಮುಖಿ
ಮಣಿಯೆ ಪತಿಚರಣದಲಿ,
ಕೌಂಗು ರಮಣನುನ್ನತ ಶಿಖಿ
ಕುಣಿಯೆ ನಭೋಂಗಣದಲಿ,
ಶುಭ್ರಮೇಘ ಸ್ವಪ್ನರಾಶಿ
ಅಭ್ರ ಮನದಿ ಬರಲು ಬೀಸಿ,
ಧೂಮ್ರದೇಹಿ ಕಪಿಶ ಕೇಶಿ
ಪುಷ್ಪ ವಿಟಪಿ ವೃಂದದಿ
ನರ್ಮಶೀಲೆ ಬನದ ಬಾಲೆ
ಕಾಂಚನಾಂಗಿ ಮಿಂಚಿ ತೇಲೆ,
ಹೊಳೆವುದಂತೆ ಪ್ರತಿಭೆ ಜ್ವಾಲೆ
ನೂತ್ನ ಕಾವ್ಯ ಛಂದದಿ!

ಉದಯಿಸಿ ಬರೆ ಬಾಲರವಿ
ಉದಯಗಿರಿ ಲಲಾಟದಿ,
ಧ್ಯಾನಲೀನನಾಗೆ ಕವಿ
ಶೈಲ ಶಿಲಾ ಪೀಠದಿ,
ರುಕ್ಮರುಚಿರ ಕಿರಣದ್ಯುತಿ,
ಸದ್ಯ ಬುದ್ಧ ಪಕ್ಷಿ ರುತಿ,
ಕಾನನ ಗಿರಿ ಭುವನ ಕೃತಿ
ಐದಲೆಲ್ಲ ವಿಸ್ಮೃತಿ;
ರೂಪರಹಿತ ಭಾವಬಿಂದು

ವಿಶ್ವರೂಪಿಯಾಗಿ ಬಂದು
ಓಂಕರಿಪುದು ಸ್ಫೂರ್ತಿಸಿಂಧು
ಕಂಪಿಸೆ ಕವಿ ರಸಮತಿ!

೦೨-೦೭-೧೯೩೨

## ಕುಕ್ಕನಳ್ಳಿ ಕೆರೆಯ ಮೇಲೆ

ಪಡುವಲೆಡೆಗೆ ಹೊರಳಿ ಹೊತ್ತು
ಕತ್ತಿ ಹೋಗಿದೆ;
ಸಂಜೆ ಮುಗಿಲ್ಗೆ ರಂಗನಿತ್ತು
ಮೂಕವಾಗಿದೆ;
ಮೊದಲಿನಿರುಳ ಕರಿಯ ಛಾಯೆ
ತಿರೆಗೆ ಬಿದ್ದಿದೆ;
ಭುವನ ಮನವ ಮೌನಮಾಯೆ
ಧ್ಯಾನಕದ್ದಿದೆ!
ಕುಕ್ಕನಳ್ಳಿ ಕೆರೆಯ ಮೇಲೆ
ಬೈಗುಗಪ್ಪು ಬಿಳ್ದ ವೇಳೆ
ಒಂಟಿಯಾಳು ಕುಳಿತಿಹೆನು
ಮಂದಿ ಬಿಟ್ಟ ದಡದಲಿ;
ಕಾಣುತಿರುವೆನೆಲ್ಲವನು,
ಹೊದರುಗಿಡದ ಬುಡದಲಿ.

ನೆತ್ತಿಮೇಲೆ ನೂರು ತಾರೆ
ತಾಣ ತಾಣದಿ
ಕೆತ್ತಿಮೆತ್ತಿದಂತೆ ತೋರೆ
ನಭ ವಿತಾನದಿ,
ಷಷ್ಠಿಶಶಿ ಮರೀಚಿಧಾರೆ
ಹರಿದಹುಟ್ಟಿಯಿಂ
ಜೇನು ಸೋರುವಂತೆ ಸೋರೆ
ಜೋತ್ಸ್ನೆ ವೃಷ್ಟಿಯಿಂ,

ಕಿರಿಯ ತೆರೆಯ ನಿರಿಯ ಸೀರೆ
ಧರಿಸಿ ಮೆರೆಯೆ ಕೊಳದ ನೀರೆ
ಚುಕ್ಕಿಯೊಡವೆಗಳನು ತೊಟ್ಟು
ಜೊನ್ನ ಹೊನ್ನ ಪೆಂಪಲಿ,
ಸಗ್ಗವೇತಕಾಚೆಯಟ್ಟು
ಚೆನ್ನ ತಿಂಗಳಿಂಪಲಿ!

ಅಲ್ಲಿ ಬಳಿಯ ದಡದಮೇಲೆ
ರಂಜಿಸುತ್ತಿದೆ
ಬೀದಿಸಾಲು ದೀಪಮಾಲೆ;
ಮಿಂಚು ಹೆತ್ತಿದೆ!
ಇಲ್ಲಿ ಕೊಳದ ಹೃದಯದಲ್ಲಿ
ದಿವ್ಯಲೀಲೆ:
ಕಡೆದ ಉರಿಯ ಕೋಲುಗೊಳ್ಳಿ!
ಜ್ಯೋತಿಶಾಲೆ!
ಒಂದು ನಿಮಿಷಕೊಂದು ಪ್ರತಿ,
ನಿಮಿಷಕೊಂದು ಕಲೆಯ ಕೃತಿ;
ನೋಡೆ ನೋಡೆ ಬುಗ್ಗೆಯಂತೆ
ದೀಪ್ತಿ ಚಿಮ್ಮಿಬಿಟ್ಟಿದೆ!
ಕಾಣೆ ಕಾಣೆ ಕೋಲಿನಂತೆ
ಬೆಂಕಿ ಹೆಪ್ಪುಗಟ್ಟಿದೆ!

ನನಸಿಗಿಂತ ಕನಸೆ ಸವಿ!
ನೆರಳೆ ತಿರುಳನು
ಮೀರಿ ಮೆರೆಯುವಿದನು ಕವಿ
ಕಂಡು ಮರುಳನು!
ದೃಶ್ಯದಿ ತಲ್ಲೀನವಾಯ್ತು,
ದಿಟ್ಟಿಮರಳೆನು.
ಕತ್ತಲಾಯ್ತು; ಹೊತ್ತು ಹೋಯ್ತು;

ಮನೆಗೆ ತೆರಳೆನು.
ಗುಡಿಗೆ ಬರುವ ಭಕ್ತರಂತೆ
ಮನದಿ ಸುಳಿದು ನೂರು ಚಿಂತೆ
ಮಂಗಳಾರತಿಯನು ಬೆಳಗಿ
ಮಸುಳಿ ಮಾಯವಾದುವು.
ಮೇಲೆ ದಿಟವದಿತ್ತು ತೊಳಗಿ,
ಕೆಳಗೆ ಸಟೆಯ ಮೋದವು!

ಎನಿತು ಸಾರಿ ಕುಳಿತು ಇಲ್ಲಿ
ಇದನು ನೋಡಿಹೆ?
ಎನಿತು ಸಾರಿ ಸೊಬಗನಿಲ್ಲಿ
ಪೂಜೆಮಾಡಿಹೆ?
ದಿನಕೆ ದಿನಕೆ ಬೆಳೆದು ಭಕ್ತಿ
ಮೋಹವಾಗಿದೆ;
ದೃಶ್ಯವಲ್ಲವಿದೂ ವ್ಯಕ್ತಿ
ಭಾವವಾಗಿದೆ!
ಸರೋವರದ ವೀಚಿಮಾಲೆ,
ಚಂದ್ರಸುಧಾರೋಚಿ ಲೀಲೆ,
ಪ್ರತಿಕೃತಿಗಳ ಕಲಾಶಾಲೆ,
ಕೆರೆಯ ಕಾವ್ಯಮನದಲಿ
ಬಹವು ಲಲಿತ ಭಾವದೋಲೆ
ಣಕ್ಷಣಕ್ಷಣದಲಿ!

ಭುವನ ಕವಿಯ ಭವ್ಯಮನದಿ
ಮೂಡೆ ಮಂತ್ರವು
ತೋರ್ಪುದೆಮಗೆ ನಿಯಮ ಗುಣದಿ
ಪ್ರಕೃತಿ ಯಂತ್ರವು.
ನನ್ನ ಕಣ್ಣೊಳಿರುವವೋಲೆ
ಕೆರೆಯ ಕಣ್ಣಲಿ
ತಾರೆ ಶಶಿಯು ಮೇಘಮಾಲೆ!
ಜಡವಿದೆನ್ನಲಿ?

ಸರೋವರಕೆ ಜೀವವಿದೆ!
ರಸಾವೇಶ ಭಾವವಿದೆ!
ಪಡಿನೆಳಲ್ಗಳದರ ಚಿಂತೆ!
ಕೆರೆಯ ಹೃದಯಕುಸಿರಿದೆ!
ನನ್ನ ಬಾಳೊಳೆಂತುಟಂತೆ
ಹಳದಿ ಕೆಂಪು ಹಸುರಿದೆ!

೧೬-೦೨-೧೯೩೧

## "ನಾನು"

ಸೀಮೆಯಿಲ್ಲದ ಗಗನ ಗಂಭೀರ ನೀಲಿಮೆಯು
ಸ್ತಬ್ಧ ನಿದ್ರೆಯ ಮಹಾಸ್ವಪ್ನದಂದದಿ ಮೇಲೆ
ನಿಷ್ಪಂದ ಮೂಕವಾಗಿದೆ. ಕೆಳಗೆ ಭೂಮಿಯನು
ವಿಕ್ಷುಬ್ಧ ವಾರಿಧಿಯ ವಿಪುಲ ನೀಲಿಮೆ ಸುತ್ತಿ,
ನೊರೆಯ ಮುತ್ತಿನ ತೆರೆಗಳಾಟದಲಿ ಘೋಷಿಸಿದೆ
ಅರ್ಥಮಯ ಅಸ್ಪಷ್ಟ ಸಂದೇಶವನು ಸಾರಿ.
ಧ್ಯಾನಯೋಗಿಗಳಂತೆ ಮುಗಿಲೆಡೆಗೆ ತಲೆಯೆತ್ತಿ
ನಿಂತಿಹವು ಪರ್ವತಶ್ರೇಣಿಗಳು, ನಿಬಿಡ ತರು
ಪರ್ಣಮಯ ವನವಸನ ವಲ್ಕಲಂಗಳನುಟ್ಟು.
ನದಿನದಗಳುದಿಸಿ ಹರಿದಿವೆ ನಿರಂತರ ಗಮನ
ಕರ್ಮದಲಿ ಮುನ್ನೀರಿನೆದೆಗೆ. ರಾಜ್ಯಗಳೆದ್ದು
ಪ್ರಲಯ ಜಿಹ್ವಾಗ್ರದಲಿ ಸಂಸ್ಕೃತಿಗಳನ್ನು ಕಟ್ಟಿ
ಬಣ್ಣಗುಳ್ಳೆಗಳಂತೆ ಬರಿದಾಗುತಿವೆ. ನರನು
ತಾನರಿಯದಿಹ ತನ್ನ ತುದಿಯಿಲ್ಲದ ಅನಂತ
ಯಾತ್ರೆಯಲಿ ಅಧಿಕಾರ ಸಂಪತ್ತು ವಿದ್ವತ್ತು
ಕೀರ್ತಿ ಕಾತರನಾಗಿ ನುಗ್ಗುತಿರುವನು ಮುಂದೆ
ಕಾಲವರ್ತಿಯ ಪೋಷಿಸುವ ತೈಲ ತಾನಾಗಿ!
ಇದನೆಲ್ಲವನು ಹೊತ್ತು ಇನಿತನೊ ಲೆಕ್ಕಿಸದೆ
ಭೂಗೋಲವಾಕಾಶ ದೇಶದಲಿ ತಿರುಗುತಿದೆ,

ನಿಷ್ಕರುಣ ನಿಯಮದಲಿ ನವಕೋಟಿ ಮೈಲಿಗಳ
ದೂರದಲಿ ಶತಪಾಲು ಹಿರಿದಾಗಿ ಉರಿಯುತಿಹ
ಇನಮಂಡಲವ ಸುತ್ತಿ! ಗಾತ್ರದಲಿ ಸೂರ್ಯನನು
ಶತಕೋಟಿ ಮೀರಿರುವ ನಕ್ಷತ್ರ ಕೋಟಿಗಳು
ಜ್ಯೋತಿವತ್ಸರಗಳತಿದೂರದವಕಾಶದಲಿ
ಖಚಿತವಾಗಿವೆ, ಚಿಂತೆ ಬಳಲುವಾಕಾಶದಲಿ!
ಈ ಮಹಾಬ್ರಹ್ಮಾಂಡ ಭಿತ್ತಿಯಲಿ ನಾನಿಹೆನು
ಕ್ಷುದ್ರದಲಿ ಕ್ಷುದ್ರತಮ ನರನಾಗಿ, ಎಲ್ಲವನು
ನನ್ನ ಮನಸಿನ ಭಾವಜಾಲದಲಿ ಸೆರೆಗೈದು!
ಅಣೋರಣೀಯನು ನಾನು ಮಹತೋ ಮಹೀಯವನು
ನುಂಗಿಹೆನು: ನನ್ನ ಚೇತನ ಜಲಧಿಯಲಿ ತೇಲಿ
ಬಾಳುತಿಹುದೀ ವಿಶ್ವ, ಸ್ವಪ್ನಮಾಯೆಯ ಹೋಲಿ!
ಕನಸಿನಾಕಾಶವದು ಎನಿತು ಹಿರಿದಾದರೇನು?
ಹಿರಿಯನಲ್ಲವೆ ಅದಕೆ ಕನಸು ಕಾಣುವ ನಾನು?

೩೦-೧೦-೧೯೩೯

## ನಿನ್ನ ಕೈಲಿಹ ಕೈದು ನಾನು

ನಿನ್ನ ಕೈಲಿಹ ಕೈದು ನಾನು !
ಕೆಲಸ ಮುಗಿಯಲು ನನ್ನ ತೊರವೆಯೇನು? |
ಸಮರದಲಿ ಜಯ ಹೊಂದಿ ಹಿಂತಿರುಗಿದಾ ಕಲಿಯು
ಬಿಲ್ಲು ಬಾಣವ ಮೂಲೆಗೆಸೆಯುವಂತೆ;
ಮೂರ್ತಿಯನು ಕಡೆದು ಮುಗಿಸಿದ ಶಿಲ್ಪಿ ಚಾಣವನು
ಹಳತೆಂದು ದೂರ ತೆಗೆದೊಗೆಯುವಂತೆ! ||
ಕರುವಿನಿಂದಲು ಸಾಕಿ ಹೊರುವ ಎತ್ತನು ಮಾಡಿ,
ಮುದಿಯಾಗಲದನುಳಿವ ರೈತನಂತೆ;
ಮುದಿತನವದೈತರಲು ತಾನು ಬಳಸಿದ ತನುವ
ಯೌವನವು ತಾನೆ ಹಳಿದುಳಿಯುವಂತೆ! ||

೦೧-೦೭-೧೯೨೯

## ಗುಟ್ಟನರಿತು ಸುಮ್ಮನಿರು

ಗುಟ್ಟನರಿತು ಸುಮ್ಮನಿರು;
ಮನವೆ, ಸುಮ್ಮನಿರು!

ನಿದ್ದೆ ಸೊಗಸು, ಸಾವು ಲೇಸು,
ಹುಟ್ಟದಿರುವುದುತ್ತಮ!
ಹುಟ್ಟಿಬಂದಮೇಲೆ, ಲೀಲೆ
ತೋರಲದುವೆ ಉತ್ತಮ!

"ಇದುವೆ ಲೇಸು" ಎಂಬರೊಡನೆ,
"ಲೇಸು, ಲೇಸು" ಎಂದಿರು.
"ಅದುವೆ ಮೇಲು" ಎಂಬರೊಡನೆ
"ಮೇಲು, ಮೇಲು" ಎಂದಿರು!

ಇದೂ ಲೇಸು ಅದೂ ಲೇಸು.
ಇದೂ ಅದೂ ಯಾವುದು?
ಇದನು ಅದನು ಮೀರುವ ಹದನು
ಪರಮ ಲೇಸು: ತಿಳಿವುದು!

೧೦-೦೧-೧೯೩೦

## ಬೆಚ್ಚುತಿದೆ ಮೈ

ಕೆಚ್ಚಿರುವುದಾತ್ಮದಲಿ
ಬೆಚ್ಚುತಿದೆ ಮೈ;
ನೆಚ್ಚಿರುವುದೆದೆಯಲ್ಲಿ,
ಕೆಚ್ಚೆಲಿಯು ಕೈ!

ಬೀಳುವೆನು ಕೆಳಗೊಮ್ಮೆ;
ಏಳುವೆನು ಮೇಲೊಮ್ಮೆ;

ಗುರು, ನಿನ್ನ ಕರೆಕರೆದು
ಮರುಕ ತಾಳುವೆನು!

ಧ್ಯೇಯವೋ ಗಗನದಲಿ;
ದೇಹವೋ ಭೂಮಿಯಲಿ;
ಬಲವಿಲ್ಲ ಭಕ್ತಿಯಲಿ,
ಮನದ ಶಕ್ತಿಯಲಿ!

ಕೆಚ್ಚಿರುವುದಾತ್ಮದಲಿ,
ಬೆಚ್ಚುತಿದೆ ಮೈ!
ನೆಚ್ಚಿರುವುದೆದೆಯಲ್ಲಿ,
ಕೆಚ್ಚೆಲಿಯ ಕೈ!

೧೮-೦೧-೧೯೩೦

## ಶಿವನ ಕೃಪೆಯದಿರಲಿ ಬಿಡು

ಶಿವನ ಕೃಪೆಯದಿರಲಿ ಬಿಡು,
ಮಂದೆ ಬರುವುದು.
ಮನುಜನೊಲ್ಮೆಯೊಂದ ಕೊಡು
ಶಿವನ ತರುವುದು.
ವೇದ ಮಾಡಬಲ್ಲುದೇನು?
ನನ್ನ ಎದೆಯನರಿವುದೇನು?
ಎದೆಯುನರಿತ ಒಲ್ಮೆ ತಾನು
ಮರಣ ಮರಣಕೆ.
ಮೆಲ್ಲನೆನ್ನನೊಯ್ದಿತಣ್ಣ
ಶಿವನ ಚರಣಕೆ.

ವೇದವಲ್ಲ, ಶಾಸ್ತ್ರವಲ್ಲ
ಬುದ್ಧಿಯೊರೆದುದು;
ನರೆತ ನವಿರ ನೀತಿಯಲ್ಲ

ತಿದ್ದಿ ಪೊರೆದುದು.
ಜಯಿಸಲೆನ್ನನೊಬ್ಬನೊಲ್ಮೆ
ಬಂದುದೊಯ್ಯನೆನ್ನ ಮೇಲ್ಮೆ;
ಹಿರಿಯ ಒಲ್ಮೆಯೊಂದೆ ಬಲ್ಮೆ
ಶಕ್ತಿ ಮುಕ್ತಿಗೆ.
ಮೆಲ್ಲನೆನ್ನ ನೊಯ್ದಿತಣ್ಣ
ಶಿವನ ಭಕ್ತಿಗೆ.

೧೪-೧೦-೧೯೨೯